ವಿಜಯಪುರ | ಸಂಪುಟ 04 | ಸಂಚಿಕೆ 088 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಮೇ, 24, 2026



"ನನ್ನ ಸೇವಾ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅಭಿವೃದ್ಧಿಪರ ಕಾರ್ಯಗಳನ್ನು ಮಾಡುತ್ತೇನೆ. ಸಿಂದಗಿ ಮತಕ್ಷೇತ್ರದ ಶ್ರೇಯೋಭಿವೃದ್ಧಿಗಾಗಿ ಸರಕಾರದ ಅನುದಾನವನ್ನು ತಂದು ಜನರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ."

■ ಅಶೋಕ ಮನಗೂಳಿ
ಶಾಸಕರು, ಸಿಂದಗಿ

## ದೇಶದ 2ನೇ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ!



**ಬೆಂಗಳೂರಿನ ಹೊರವಲಯದಲ್ಲಿರುವ ಆನೇಕಲ್‌ನಲ್ಲಿ ಹೊಸ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಅಧಿಕೃತ ಮುದ್ರೆ | ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭೂಮಿಪೂಜೆ**

ಆನೇಕಲ್: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅವರು, ಬೆಂಗಳೂರಿನ ಹೊರವಲಯದಲ್ಲಿರುವ ಆನೇಕಲ್‌ನಲ್ಲಿ ಹೊಸ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಅಧಿಕೃತವಾಗಿ ಶಂಕುಸ್ಥಾಪನೆ ನೆರವೇರಿಸಿದರು. 943 ಕೋಟಿ ರೂಪಾಯಿಯ ಈ ಬೃಹತ್ ಯೋಜನೆಯು 80 ಎಕರೆಗಳಷ್ಟು ವಿಸ್ತೀರ್ಣದಲ್ಲಿದ್ದು, 80,000 ಪ್ರೇಕ್ಷಕರಿಗೆ ಆಸನ ವ್ಯವಸ್ಥೆ ಹೊಂದಲಿದೆ. ಇದು ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಲಿದೆ.

ಕರ್ನಾಟಕ ಗೃಹ ಮಂಡಳಿ (ಏಊಃ) ವತಿಯಿಂದ ಸುಮಾರು 100 ಎಕರೆ ಜಾಗದಲ್ಲಿ, ಸುಮಾರು 943 ಕೋಟಿ ರೂಪಾಯಿ ಭಾರಿ ವೆಚ್ಚದಲ್ಲಿ ಈ ಅತ್ಯಾಧುನಿಕ ಸ್ಟೇಡಿಯಂ ನಿರ್ಮಾಣವಾಗುತ್ತಿದೆ. ಈ ಕ್ರೀಡಾಂಗಣವನ್ನು ಕೇವಲ 2 ರಿಂದ 3 ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಏಕಕಾಲಕ್ಕೆ 500ಕ್ಕೂ ಹೆಚ್ಚು ವಾಹನಗಳನ್ನು ಪಾರ್ಕ್ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಇದೆ. ಕ್ರೀಡಾ ಪ್ರೇಮಿಗಳಿಗಾಗಿ ವಾಣಿಜ್ಯ ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಹಾರ ಗೃಹಗಳು ಇವೆ. ಆಟಗಾರರು, ಕೋಚ್‌ಗಳು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯ ಹೂಡಲು ಹೈಟೆಕ್ ವಸತಿ ಗೃಹಗಳು. ಗಣ್ಯರ ತುರ್ತು ಆಗಮನಕ್ಕಾಗಿ ಹೆಲಿಪ್ಯಾಡ್, ಸಾರ್ವಜನಿಕ ಪ್ಲಾಜಾ ಮತ್ತು ಸುತ್ತಲೂ ಆಕರ್ಷಕ ಹಸಿರು ವಲಯ ಇರಲಿದೆ.

## ಭೀಕರ ಅಪಘಾತ:ಒಂದೇ ಕುಟುಂಬದ ಐವರ ಸಾವು

ವಾಡಿ: ಕ್ರೂಸರ್ ಹಾಗೂ ಲಾರಿ ನಡುವೆ ಭೀಕರ ಅಪಘಾತ ಸಂಭವಿಸಿ ಒಂದೇ ಕುಟುಂಬದ ಐವರು ದುರ್ಮರಣಕ್ಕೀಡಾದ ಘಟನೆ ಶುಕ್ರವಾರ ತಡರಾತ್ರಿ ಚಿತ್ತಾಪುರ ತಾಲೂಕಿನ ವಾಡಿ ಸಮೀಪದ ರಾಷ್ಟ್ರೀಯ ಹೆದ್ದಾರಿ–150 ರಲ್ಲಿ ನಡೆದಿದೆ.

ಮಹ್ಮದ್ ಹುಸೇನ್ (60), ಫಾತಿಮಾ ಅಬ್ದುಲ್ ಸಾಬ್ (40), ರಸೂಲ್ ಬೀ (40), ಮಹೆಬೂಬ್ ಸಂಗಾವಿ (37), ಕ್ರೂಸರ್ ಚಾಲಕ ತೋಲು ಪಾಷಾ (24) ಮೃತಪಟ್ಟ ದುರ್ದೈವಿಗಳು. ಮೃತರೆಲ್ಲರೂ ಚಿತ್ತಾಪುರ ತಾಲೂಕಿನ ಇಂಗಳಗಿ ಗ್ರಾಮದ ನಿವಾಸಿಗಳಾಗಿದ್ದಾರೆ.

ಮಹ್ಮದ್ ಅಬ್ದುಲ್ ಸಾಬ್ ಎಂಬ ಯುವಕ ರಾತ್ರಿ ವೇಳೆ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಎನ್ನಲಾಗಿದ್ದು, ರೋಗಿಯನ್ನು ಯಾದಗಿರಿ ನಗರದ ಆಸ್ಪತ್ರೆಗೆ ದಾಖಲಿಸಲು 8 ಜನರು ಕ್ರೂಸರ್ ವಾಹನದಲ್ಲಿ ಹೋಗಿದ್ದರು.

## ತಾ.ಪಂ. ಕಚೇರಿ ಜಾಗದಲ್ಲೇ ವಿಕಲಚೇತನರ ಸಮುದಾಯ ಭವನ



■ ಉದಯರಶ್ಮಿ ದಿನಪತ್ರಿಕೆ

**ಶಾಸಕ ಅನಿಲ್ ಚಿಕ್ಕಮಾದು ಭರವಸೆ | ಪಿಂಚಣಿ ಮುಂದುವರೆಸಲು ಪತ್ರ**

ಎಚ್ ಡಿ ಕೋಟೆ: ವಿಕಲಚೇತನರು ಸಮಾಜದಲ್ಲಿ ಸಮಾನವಾಗಿ ಪ್ರಗತಿ ಸಾಧಿಸಲು ಸರ್ಕಾರದ ಜನಪರ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಹೇಳಿದರು.

ಪಟ್ಟಣದ ತಾಲೂಕು ಪಂಚಾಯತಿ ಕಛೇರಿಯಲ್ಲಿ ತಾಲೂಕು ಪಂಚಾಯತ್ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ವಿಕಲಚೇತನರ ಸಾಧನ/ಸಲಕರಣೆ ವಿತರಣೆ ಮತ್ತು ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಮಂಡಳಿ ವತಿಯಿಂದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದರು.

ಸರ್ಕಾರದ ಯೋಜನೆಗಳನ್ನು ಯಾರು ಕೂಡ ದುರ್ಬಳಕೆ ಮಾಡಿಕೊಳ್ಳಬಾರದು. ಲ್ಯಾಪ್ ಟಾಪ್ ಗಳನ್ನೂ ಸಿಬ್ಬಂದಿಗಳು ಸರ್ಕಾರಿ ಕಚೇರಿಯಲ್ಲೇ ಬಳಸಬೇಕು, ಕೆಲಸ ಮುಗಿದ ಬಳಿಕ ಆಫೀಸ್ ನಲ್ಲೇ ಇಟ್ಟು ಹೋಗಬೇಕು. ಮನೆಗೆ ತೆಗೆದುಕೊಂಡು ಹೋಗಿ ತಮ್ಮ ಮಕ್ಕಳಿಗೆ, ಸಂಬಂಧಿಕರಿಗೆ ಕೊಡುವ ಕೆಲಸ ಮಾಡಬಾರದು. ಇದನ್ನು ನಾನು ಸಹಿಸುವುದಿಲ್ಲ. ಈ ಬಗ್ಗೆ ನನ್ನ ಗಮನಕ್ಕೆ ಬಂದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ ನೀಡಿದರು.

ಸಮುದಾಯ ಭವನ ಮತ್ತು ಸಭೆ ಸಮಾರಂಭ ನಡೆಸಲು ಸಭಾಂಗಣ ಬೇಕು ಎಂದು ವಿಕಲಚೇತನರು ನನಗೆ ಮನವಿ ಪತ್ರ ನೀಡಿದ್ದಾರೆ. ಖಂಡಿತವಾಗಿಯೂ ತಾಲೂಕು ಪಂಚಾಯತ್ ಕಚೇರಿ ಜಾಗದಲ್ಲೇ ಸಮುದಾಯ ಭವನ ನಿರ್ಮಾಣಕ್ಕೆ ಜಾಗ ಗುರುತಿಸಿ, ಶಾಸಕರ ಅನುದಾನದಲ್ಲಿ ಆದಷ್ಟು ಬೇಗ ಕಟ್ಟಡ ಕಾಮಗಾರಿ ಆರಂಭಿಸಲಾಗುವುದು. ಸ್ಥಗಿತಗೊಂಡಿರುವ ಪಿಂಚಣಿಯನ್ನು ಮತ್ತೆ ಮುಂದುವರೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಗಮನಕ್ಕೆ ತರಲಾಗುವುದು. ಇದರ ಜೊತೆಗೆ ನಾನೇ ಖುದ್ದಾಗಿ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಗಿರಿಜನ ಕಲ್ಯಾಣ ಅಧಿಕಾರಿ ಮಹೇಶ್, ದೇವರಾಜು ಅರಸು ನಿಗಮದ ಮಹದೇವ್, ರಾಘವೇಂದ್ರ ವಿಶೇಷ ಚೇತನ ತಾಲೂಕು ಸಂಯೋಜಕ ಮಹದೇವಯ್ಯ, ಸೇರಿದಂತೆ ತಾ.ಪಂ.ಸಿಬ್ಬಂದಿ ಉಪಸ್ಥಿತರಿದ್ದರು.

## ಮಕ್ಕಳ ಸಮಗ್ರ ಬೆಳವಣಿಗೆಗೆ ಕೈಜೋಡಿಸಿ :ಡಿಸಿ ಡಾ.ಆನಂದ

### ವಿಜಯಪುರದಲ್ಲಿ ಅಂಗನವಾಡಿ ಶಿಕ್ಷಕಿಯರು- ಸಹಾಯಕಿಯರಿಗೆ ಬುನಾದಿ ತರಬೇತಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಅಂಗನವಾಡಿ ಕೇಂದ್ರಗಳು ಮಹತ್ವದ ಪಾತ್ರವಹಿಸುತ್ತಿವೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಆನಂದ.ಕೆ ಅವರು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ ಸಹಯೋಗದಲ್ಲಿ ನಗರದ ಕಂದಗಲ್ ಹನುಮತರಾಯ ರಂಗಮಂದಿರದಲ್ಲಿ ಹೊಸದಾಗಿ ನೇಮಕವಾದ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ಮೇ.21ರಂದು ಹಮ್ಮಿಕೊಂಡಿದ್ದ ಬುನಾದಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಆರೋಗ್ಯ,ಶಿಕ್ಷಣ ಮತ್ತು ಉತ್ತಮ ಸಂಸ್ಕಾರಗಳ ಬುನಾದಿ ಬಾಲ್ಯಾವಸ್ಥೆಯಲ್ಲೇ ನಿರ್ಮಾಣವಾಗುತ್ತದೆ. ಹಾಗಾಗಿ ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರು ತಮ್ಮ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಬೇಕು ಎಂದರು.

ಇನ್ನೊಂದೆಡೆ ಸರ್ಕಾರ ಮಕ್ಕಳ ಹಾಗೂ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಅಂಗನವಾಡಿ ಶಿಕ್ಷಕಿಯರು ಅಂಗನವಾಡಿ ಕೇಂದ್ರಕ್ಕೆ ಮಾತ್ರ ಸೀಮಿತವಾಗದೆ ಗ್ರಾಮ ಮತ್ತು ಸಮುದಾಯ ಮಟ್ಟದಲ್ಲಿಯೂ ಜನರಿಗೆ ಈ ಯೋಜನೆಗಳ ಮಾಹಿತಿ ತಲುಪಿಸಿ, ಅವುಗಳ ಸದುಪಯೋಗ ಪಡೆಯಲು ಪ್ರೇರಣೆ ನೀಡಬೇಕು ಎಂದರು.

ಕಾರ್ಯಕ್ರಮದ ಹೊಸದಾಗಿ ನೇಮಕವಾದ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ಮಕ್ಕಳ ಆರೈಕೆ, ಪೌಷ್ಟಿಕ ಆಹಾರ, ಶಿಕ್ಷಣ ಚಟುವಟಿಕೆಗಳು ಹಾಗೂ ಆರೋಗ್ಯ ಸಂಬಂಧಿತ ವಿವಿಧ ತರಬೇತಿ ಅಧಿವೇಶನಗಳನ್ನು ನಡೆಸಲಾಯಿತು.

ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕ್ಷೇತ್ರಮಟ್ಟದ ಅನುಭವಗಳನ್ನೂ ಹಂಚಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ. ಚವ್ಹಾಣ, ಕಾರ್ಯಕ್ರಮಾಧಿಕಾರಿ ನಿರ್ಮಲಾ ಸುರಪುರ, ದೀಪಾಕ್ಷಿ, ಜಾನಕಿ, ಅಜೀಂ ಪ್ರೇಮಜಿ ಫೌಂಡೇಶನ್ ಜಿಲ್ಲಾ ಸಂಯೋಜಕ ಹರೀಶ ಕೆ.ಆರ್., ಅಂಗನವಾಡಿ ಶಿಕ್ಷಕಿಯರು, ಸಹಾಯಕಿಯರು ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸದಸ್ಯರು ಭಾಗವಹಿಸಿದ್ದರು.

## ಇಂಡಿ–ಸೋಲಾಪುರ ವ್ಹಾಯಾ ಲಚ್ಯಾಣ ಬಸ್ಸಿಗೆ ಶಾಸಕರಿಂದ ಚಾಲನೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ಲಚ್ಯಾಣ ಗ್ರಾಮದ ಶ್ರೀ ಸಿದ್ಧಲಿಂಗೇಶ್ವರ ಭಕ್ತರ ವ್ಯಾಪಾರಸ್ಥರ ನೌಕರರ ಬಹುದಿನಗಳ ಬೇಡಿಕೆಗೆ ಶಾಸಕ ಯಶವಂತಗೌಡ ಪಾಟೀಲರು ಸ್ಪಂದಿಸಿ ಸಿಂದಗಿಯಿಂದ ಇಂಡಿ ಲಚ್ಯಾಣ ಮೂಲಕ ಸೋಲಾಪುರಕ್ಕೆ ಹೋಗುವ ಬಸ್ಸಿಗೆ ಚಾಲನೆ ನೀಡಿದರು. ಶಾಸಕ ಯಶವಂತರಾಯಗೌಡ ಪಾಟೀಲರು ಮಾತನಾಡಿ, ಸೋಲಾಪುರ ಮತ್ತು ಮಹಾರಾಷ್ಟ್ರದ ವಿವಿಧ ಕಡೆಯಿಂದ ಬರುವ ಭಕ್ತರಿಗೆ ಈ ಬಸ್ಸು ಅನುಕೂಲವಾಗುತ್ತದೆ ಎಂದರು.

ಸಿಂದಗಿಯಿಂದ ಮಧ್ಯಾನ್ಹ 2 ಗಂಟೆಗೆ ಇಂಡಿಯಿಂದ 3.45 ಕ್ಕೆ ಬಿಡುವ ಬಸ್ಸು ಲಚ್ಯಾಣ 4 ಗಂಟೆಗೆ, ಅಹಿರಸಂಗ, ಭೈರುಣಗಿ, ಭತಗುಣಕಿ ಹಲಸಂಗಿ ಧೂಳಖೇಡ ಮಾರ್ಗವಾಗಿ ಸೋಲಾಪುರ ತಲುಪುವದು.

ಸೋಲಾಪುರದಿಂದ ಸಂಜೆ 7 ಗಂಟೆಗೆ ಬಿಡುವ ಬಸ್ಸು ಇದೇ ಮಾರ್ಗದಲ್ಲಿ ಇಂಡಿಯಿಂದ ಸಿಂದಗಿಗೆ ಹೋಗಲಿದೆ.

ಕಾರ್ಯಕ್ರಮದಲ್ಲಿ ಕಂದಾಯ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ಬಿ.ಎಸ್. ಕಡಕಬಾವಿ, ಇಓ ಮಹಾದೇವಪ್ಪ ಏವೂರ ಮತ್ತಿತರಿದ್ದರು.


## ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ : ಕ್ರಮಕ್ಕೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಜಿಲ್ಲೆಯಾದ್ಯಂತ ಮುಂಗಾರು ಮಳೆ ಆರಂಭವಾಗುತ್ತಿದ್ದು ಈಗಲೇ ರಸಗೊಬ್ಬರ ಲಭ್ಯವಿಲ್ಲವೆಂದು ಖಾಸಗಿ ಮಾರಾಟ ಮಳಿಗೆಗಳಲ್ಲಿ ನಾಮ ಫಲಕ ಹಾಕಿ ಸರ್ಕಾರ ನಿಗಧಿ ಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆ ರಸಗೊಬ್ಬರ ಮಾರಾಟ ಮಾಡುತ್ತಿರುವುದು ಕಂಡು ಬರುತ್ತಿದ್ದು ಕೂಡಲೇ ಕಠಿಣ ಕ್ರಮ ಜರುಗಿಸಬೇಕೆಂದು ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿಗೆ ಶುಕ್ರವಾರರಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಈ ಸಮಯದಲ್ಲಿ ಸಂಘಟನೆಯ ಜಿಲ್ಲಾ ಬಸವರಾಜ ಸಿಂಗನಹಳ್ಳಿ ಮಾತನಾಡಿ, ರೈತರು ಬಿತ್ತನೆಗಾಗಿ ಬೀಜ ಹಾಗೂ ರಸಗೊಬ್ಬರ ಖರಿದಿಸಲು ರೈತ ಸಂಪರ್ಕ ಕೇಂದ್ರಗಳಿಗೆ ಹಾಗೂ ಖಾಸಗಿ ಮಾರಾಟ ಮಳಿಗೆಗಳಿಗೆ ತೆರಳುತ್ತಿದ್ದಾರೆ ರಸ ಗೊಬ್ಬರ ಸ್ಟಾಕ್ ಇಲ್ಲಾವೆಂಬ ನಾಮಫಲಕ ಏಷ್ಟು ಸರಿ ಎಂದು ಪ್ರಶ್ನೀಸಿದ ಅವರು, ಇದರಿಂದ ಬಡ ಮತ್ತು ಮಧ್ಯಮ ವರ್ಗದ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದು ಕೃಷಿ ಚಟುವಟಿಕೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಕೂಡಲೇ ಸರ್ಕಾರವು ಎಚ್ಚೆತ್ತುಕೊಳ್ಳಬೇಕಾಗಿದೆ. ಜಿಲ್ಲೆಯ ಎಲ್ಲ ರೈತ ಸಂಪರ್ಕ ಕೇಂದ್ರಗಳ ಮುಂದೆ ಕಡ್ಡಾಯವಾಗಿ ಬೀಜ ರಸಗೊಬ್ಬರಗಳ ದರಪಟ್ಟಿ ಮತ್ತು ಲಭ್ಯವಿರುವ ಸ್ಟಾಕ್ ವಿವರವನ್ನು ಸಾರ್ವಜನಿಕವಾಗಿ ಪ್ರದರ್ಶಿಸುವಂತೆ ಕ್ರಮ ವಹಿಸಬೇಕು. ಹಾಗೆಯೇ ಹತ್ತಿ ಬೀಜ ಸೇರಿದಂತೆ ಇತರೆ ಎಲ್ಲಾ ಬೀಜಗಳ ಅಧಿಕೃತ ಮಾರಾಟದ ದರಪಟ್ಟಿಯನ್ನು ಪ್ರದರ್ಶಿಸಿ ಸರ್ಕಾರ ನಿಗಧಿಪಡಿಸಿದ ಬೆಲೆಯಲ್ಲಿಯೇ ಮಾರಾಟವಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕೆಂದು ಒತ್ತಾಯಿಸಿದ ಅವರು, ಸರ್ಕಾರದ ನಿಯಮ ಉಲ್ಲಂಘಿಸಿ ಹೆಚ್ಚಿನ ಬೆಲೆ ರಸಗೊಬ್ಬರ ಮಾರಾಟ ಮಾಡುವ ಮಳಿಗೆಗಳ ಮೇಲೆ ವ್ಯಾಪಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ಈ ಸಮಯದಲ್ಲಿ ಸಂಘಟನೆಯ ಜಿಲ್ಲಾ ಕಾರ್ಯಾಧ್ಯಕ್ಷ ಬಾಪುಗೌಡ ಪಾಟೀಲ, ಸಹದೇವಪ್ಪ ದೊಡಮನಿ, ಹಣಮಂತ ಗುತ್ತೇದಾರ, ರುದ್ರೇಶ ಮುರಾಳ, ಸುರೇಶ ರಾಠೊಡ, ನಿಂಗನಗೌಡ ಬಸರೆಡ್ಡಿ, ಹಣಮಂತ ತಳ್ಳೊಳ್ಳಿ, ಸಂತೋಷ ಹೆಗರಡ್ಡಿ, ಮೊದಲಾದವರು ಇದ್ದರು.



## ಕುಡಿಯುವ ನೀರಿಗೆ ಕ್ರಮ ಕೈಕೊಳ್ಳಿ : ಶಾಸಕ ಯಶವಂತರಾಯಗೌಡ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಬೇಸಿಗೆ ಮುಗಿಯುತ್ತ ಬಂದಿದೆ. ತಾಲೂಕಿನಲ್ಲಿ ನಗರ ಮತ್ತು ಗ್ರಾಮೀಣ ಜನರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಕೊಳ್ಳಿ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದ ಪ್ರವಾಸಿ ಮಂದಿಎದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶಿಲನಾ ಸಭೆಯಲ್ಲಿ ಮಾತನಾಡುತ್ತಿದ್ದರು.

ತಾಲೂಕಿನ ರಾಮ ತೀರ್ಥ ತಾಂಡಾದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಅದು ಬಿಟ್ಟರೆ ಬಹುತೇಕ ಎಲ್ಲಿಯೂ ಇಲ್ಲ. ಕೂಡಲೇ ರಾಮತೀರ್ಥ ಗ್ರಾಮದ ಕುಡಿಯುವ ನೀರಿನ ತೊಂದರೆಗೆ ಕ್ರಮ ವಹಿಸಲು ಕೇಳಿಕೊಂಡರು.

ಅದಕ್ಕೆ ಉತ್ತರಿಸಿದ ಗ್ರಾಮೀಣ ಕಿರು ನೀರು ಸರಬರಾಜು ಅಧಿಕಾರಿಗಳು ರಾಮತೀರ್ಥ ಗ್ರಾಮಕ್ಕೆ ಹೊರ್ತಿ ಪ್ರದೇಶದಿಂದ ನೀರಿನ ಪೂರೈಕೆ ಯಾಗುತ್ತಿದೆ. ರಾಮತೀರ್ಥ ತುಂಬ ಎತ್ತರ ಪ್ರದೇಶದಲ್ಲಿದೆ, ಹೊರ್ತಿ ಮತ್ತು ಸುತ್ತಲಿನ ಐದು ಗ್ರಾಮಗಳಿಗೆ ಐದು ಗಂಟೆ ನೀರಿನ ಪೂರೈಕೆ ಬಂದು ಮಾಡಿ ನೀರು ಬಿಡಬೇಕಾಗುತ್ತದೆ. ಹೀಗಾಗಿ ಬರುವ ದಿನಗಳಲ್ಲಿ ಸಮೀಪದಲ್ಲಿಯೇ ಇರುವ ಕೆರೆಯ ಪೂಲಕ ಪಾಯಿಪ ಲಾಯಿನ ಕಾರ್ಯ ಮಾಡಿ ವ್ಯವಸ್ಥೆ ಕಲ್ಪಿಸಲು ಕ್ರೀಯಾಯೋಜನೆ ರೂಪಿಸಲಾಗಿದೆ ಎಂದರು.

ತಾ.ಪಂ ಇಓ ಮಲ್ಲಿಕಾರ್ಜುನ ಏವೂರ ಮಾತನಾಡಿ ತಾಲೂಕಿನಲ್ಲಿ 68 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು ಅವುಗಳನ್ನು ರಿಪೇರಿ ಮಾಡಿ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಪ್ರಯತ್ನಿಸಲಾಗುತ್ತಿದೆ ಎಂದರು.

ಕೃಷ್ಣಾ ಕಾಲುವೆ ಅಧಿಕ್ಷಕ ಅಭಿಯಂತರ ಮನೋಜಕುಮಾರ ಗಡಬಳ್ಳಿ ಮಾತನಾಡಿ ಕೃಷ್ಣಾ ಮುಖ್ಯ ಕಾಲುವೆಗೆ ಈಗಾಗಲೇ ನೀರು ಬಿಟ್ಟಿದ್ದು ಅದು ಸಂಗೋಗಿ ಕೆರೆಯ ವರೆಗೆ ಬಂದಿದ್ದು ಕೆರೆ ತುಂಬಿದ ನಂತರ ಎರಡು ಟಿಎಂಸಿ ನೀರಿನಲ್ಲಿ ಎಲ್ಲ ಕೆರೆಗಳನ್ನು ತುಂಬಿ ಗ್ರಾಮಸ್ಥರಿಗೆ ತೊಂದರೆಯಾಗದಂತೆ ಮಾಡುತ್ತೇವೆ. ಅದರಂತೆ ಶಾಸಕರು ತಾಲೂಕಿನ ರೋಡಗಿ, ಖ್ಯಾಡಗಿ, ಬ್ಯೂಯ್ಯಾರ ಅಗರಖೇಡ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಆಗಬಾರದು. ಹೀಗಾಗಿ ಕಾಲುವೆಯಿಂದ ನೀರು ಭೀಮಾ ನದಿಗೆ ಹರಿಸಿ ಅಲ್ಲಿಂದ ಪೂರೈಸಲು ಕೇಳಿ ಕೊಂಡರು. ಮನೋಜಕುಮಾರ ಗಡಬಳ್ಳಿಯವರು ಮಾತನಾಡಿ, ಅದಕ್ಕೆ ಇನ್ನು ಒಂದು ಟಿಎಂಸಿ ನೀರು ಬೇಕಾಗುತ್ತದೆ ಎಂದರು.

ಬಹುತೇಕ ತಾಲೂಕಿನ ಕೆರೆಗಳಲ್ಲಿ ಶೇ 30 ರಷ್ಟು ನೀರಿದೆ. ಆದರೆ ಲೋಣಿ ಮತ್ತು ಅರ್ಜನಾಳ ಕೆರೆಗಳಲ್ಲಿ ನೀರಿಲ್ಲ. ಸಧ್ಯ ಕೃಷ್ಣಾ ಕಾಲುವೆಗೆ ನೀರು ಬಿಟ್ಟಿದ್ದು ಕೆರೆಗಳನ್ನು ತುಂಬಿಸಲಾಗುವದೆಂದು ಮನೋಜಕುಮಾರ ಗಡಬಳ್ಳಿ ತಿಳಿಸಿದರು.

ಇಂಡಿ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇಲ್ಲ. ಭೀಮಾ ನದಿಯಿಂದ ಬಿಟ್ಟ ನೀರು ಪೂರೈಸಲಾಗುತ್ತಿದೆ. ಮೇಗಾ ಮಾರ್ಕೆಟ ಸಾರ್ವಜನಿಕರಿಗೆ ಉಪಯೋಗವಾಗಲು ಕ್ರಮ ಕೈಕೊಳ್ಳಬೇಕೆಂದು ನಗರಸಭೆ ಆಯುಕ್ತರನ್ನು ಕೇಳಿಕೊಂಡರು. ಮತ್ತು ಕರ ವಸೂಲಾತಿ ಹೆಚ್ಚಿಸಿ ಆ ಹಣವನ್ನು ಕುಡಿಯುವ ನೀರು ಮತ್ತು ಸ್ವಚ್ಛತೆಗೆ ಬಳಸಲು ಕೇಳಿಕೊಂಡರು.

ಸಾವಳಸಂಗ ಅರಣ್ಯ ಪ್ರದೇಶದಲ್ಲಿ ಖಾಸಗಿಯವರು ಗಾಳಿಯಂತ್ರದಿಂದ ವಿದ್ಯುತ್ ತಯಾರಿಸುತ್ತಿದ್ದು ಅವರ ವಿದ್ಯುತ್ ತಂತಿ ಮತ್ತು ಕಂಬಗಳು ಅರಣ್ಯ ಪ್ರದೇಶದಿಂದ ಹೋದ ಕಾರಣ ಎರಡು ಸಾವಿರ ಗಿಡ ಹಾಳಾಗಿವೆ. ಕಾರಣ ಕಂಪನಿಯವರ ಮೇಲೆ ಕೇಸು ದಾಖಲಿಸಿ ನಿರ್ದಾಕ್ಷಿಣ ಕ್ರಮ ಕೈಕೊಳ್ಳಲು ತಿಳಿಸಿದರು.

ತಾಲೂಕಿನಲ್ಲಿರುವ ಕೆಲವು ಕೆರೆಯ ಸುತ್ತಲೂ ರೈತರು ಭೋರ್ ಹೊಡೆಯುತ್ತಿರುವದು, ಪಾಯಿಪ್ ಹಾಕುವದು ಕೃಷಿಗಾಗಿ ನೀರು ಬಳಸುತ್ತಿದ್ದು ಅವರ ಮೇಲೆ ಕ್ರಮಕ್ಕಾಗಿ ಸಣ್ಣ ನೀರಾವರಿ ಅಧಿಕಾರಿಗಳಿಗೆ ತಿಳಿಸಿದರು.

ತಾಲೂಕಿನಲ್ಲಿ ಸಾತಲಗಾಂವ ನಾದ ರಸ್ತೆ, ಸಾಲೋಟಗಿ ನಾದ ರಸ್ತೆ ರೂಗಿ ಹಿರೇಮಸಳಿ ರಸ್ತೆಗಳನ್ನು ಮುಂದಿನ ತಿಂಗಳಲ್ಲಿ ಪೂರ್ತಿಗೊಳಿಸುವದಾಗಿ ಲೋಕೋಪಯೋಗಿ ಇಲಾಖೆಯ ದಯಾನಂದ ಮಠ ತಿಳಿಸಿದರು.

ಸಭೆಯಲ್ಲಿ ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಮೂರ್ತಿ, ತಹಸೀಲ್ದಾರ ಬಿ.ಎಸ್. ಕಡಕಬಾವಿ, ಡಿ.ವಾಯ್ ಎಸ್ ಪಿ ಸದಾಶಿವ ಕಟ್ಟಿಮನಿ, ತಾ.ಪಂ ಇಓ ಮಹಾದೇವಪ್ಪ ಏವೂರ, ಕೃಷ್ಣಾ ಮೇಲ್ದಂಡೆ ಯೋಜನೆಯ ಗೋವಿಂದ, ಮನೋಜಕುಮಾರ, ನಗರಸಭೆ ಆಯುಕ್ತ ಶಿವಾನಂದ ಪೂಜಾರಿ, ಆರೋಗ್ಯ ಅಧಿಕಾರಿ ಡಾ|| ರಾಜೇಶ ಕೋಳೆಕರ,ಅರಣ್ಯ ಅಧಿಕಾರಿಗಳಾದ ಎಸ್.ಜೆ.ಸಂಗಾಲಕ, ಮುಂಜುನಾಥ ಧುಳೆ, ಹೆಸ್ಕಾಂನ ಇಇ ಎಸ್.ಎ ಬಿರಾದಾರ, ಎಇಇ ಎಸ್. ಆರ್ ಮೆಂಡೆದಾರ ಗ್ರಾಮೀಣ ನೀರು ಸರಬರಾಜು ಎಇಇ ಶಿವಾಜಿ ಬನಸೋಡೆ ಮತ್ತಿತರಿದ್ದರು.



# ಭಯೋತ್ಪಾದನೆ ನಿರ್ಮೂಲನೆಗೆ ದೃಢ ಸಂಕಲ್ಪದೊಂದಿಗೆ ಕಾರ್ಯನಿರ್ವಹಣೆ ಅಗತ್ಯ

ಕಲಬುರಗಿ: ನಮ್ಮ ದೇಶ ಸೇರಿದಂತೆ ವಿಶ್ವದಲ್ಲಿ ದಿನನಿತ್ಯಲೂ ನೂರಾರು ಅಮಾಯಕರ ಸಾವಿಗೆ ಕಾರಣವಾಗಿ, ಜಗತ್ತನ್ನು ತಲ್ಲಣಗೊಳಿಸಿ, ಅಶಾಂತಿಯುತವಾದ ವಾತಾವರಣದ ಸೃಷ್ಟಿಗೆ ಕಾರಣೀಕೃತವಾದ ಭಯೋತ್ಪಾದನೆ ಎಂಬುದು ದೊಡ್ಡ ಸಾಮಾಜಿಕ ಪಿಡುಗಾಗಿದೆ. ರಾಷ್ಟ್ರದ ಶಾಂತಿ, ಅಭಿವೃದ್ಧಿಗೆ ಇದು ತೊಡಕಾಗಿದ್ದು, ಅದರ ನಿರ್ಮೂಲನೆಗೆ ಎಲ್ಲರೂ ಜೊತೆಗೂಡಿ ಬೇರು ಸಹಿತ ಸರ್ವನಾಶ ಮಾಡುವ ದೃಢ ಸಂಕಲ್ಪದೊಂದಿಗೆ ಕಾರ್ಯನಿರ್ವಹಿಸಬೇಕಾಗಿದೆ. ಭಯೋತ್ಪಾದನೆಗೆ ಎಂದಿಗೂ ಕೂಡಾ ಪ್ರತ್ಯಕ್ಷವಾಗಲಿ ಅಥವಾ ಪರೋಕ್ಷವಾಗಿ ಆಗಲಿ ಬೆಂಬಲಿಸುವುದು ದೇಶದ್ರೋಹ ಕೆಲಸವಾಗಿದೆ ಎಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ಗುರುವಾರ 'ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿ ಅವರು ಮಾತನಾಡುತ್ತಿದ್ದರು.

ಶಾಂತಿ, ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ದೇಶದಲ್ಲಿ ಕೆಲವು ದುಷ್ಟ ಶಕ್ತಿಗಳು ಸಮಾಜದಲ್ಲಿ ಅರಾಜಕತೆಯ ವಾತವರಣವನ್ನು ಸೃಷ್ಟಿಸುವ ಕಾರ್ಯವನ್ನು ಮಾಡುತ್ತಿವೆ. ಅಂತಹ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯ ಒಕ್ಕೊರಲಿನಿಂದ ಖಂಡಿಸುವ ಮೂಲಕ, ಅದರ ನಾಶಕ್ಕೆ ಶ್ರಮಿಸಬೇಕಾಗಿದೆ ಎಂದು ಮಾರ್ಮಿಕವಾಗಿ ನುಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ದತ್ತು ಹಡಪದ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಡಾ.ರಾಜಶೇಖರ ಪಾಟೀಲ, ದಿನೇಶ್ ಮಿಶ್ರಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲ ನೌಕರರ ಸಹಕಾರ ಅವಶ್ಯಕ



ನವಲಗುಂದ : ತಾಲ್ಲೂಕಿನಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲ ನೌಕರರು ಸಹಕಾರ ಅವಶ್ಯಕವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಜುನ ನಾಗಪ್ಪ ಕಂಬೋಗಿ ಹೇಳಿದರು.ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ತಾಲ್ಲೂಕು ಘಟಕದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಸರ್ಕಾರಿ ನೌಕರರ ಮಾನಸಿಕ ಹಾಗೂ ದೈಹಿಕ ಆರೋಗ್ಯದ ದೃಷ್ಟಿಯಿಂದ ಸಂಘದಿಂದ ಮುಂಬರುವ ದಿನಗಳಲ್ಲಿ ನೌಕರರಿಗಾಗಿ ಸಾಂಸ್ಕೃತಿ–ಕ ಕಾರ್ಯಕ್ರಮಗಳನ್ನು, ಕ್ರೀಡಾ ಚಟುವಟಿಕೆಗಳನ್ನು ಹಾಗೂ ಸಮಾಜಮುಖಿ ಕಾರ್ಯವಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸುವಂತೆ ಕರೆ ನೀಡಿದರು.

?ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ವಿ.ಡಿ.ರಂಗಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿ ತಾಲ್ಲೂಕಿಗೆ ನೂತನವಾಗಿ ಆಗಮಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಅರ್ಜುನ ಕಂಬೋಗಿ ಅವರ ಅಧಿಕಾರಾವಧಿಯಲ್ಲಿ ತಾಲೂಕಿನ ಶಿಕ್ಷಣ ಕ್ಷೇತ್ರವು ಮತ್ತಷ್ಟು ಪ್ರಗತಿ ಹೊಂದಲಿ ಹಾಗೂ ನೌಕರರ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತಾಗಲಿ. ಇಲಾಖೆಯ ಎಲ್ಲಾ ಶೈಕ್ಷಣಿಕ ಕಾರ್ಯಗಳಿಗೆ ಸಂಘವು ಸಂಪೂರ್ಣ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಸಂಘದ ಕಾರ್ಯದರ್ಶಿ ಎಲ್.ವಾಯ್. ರಾಯಪ್ಪನವರ, ಕೋಶಾಧ್ಯಕ್ಷ ಎನ್.ವಾಯ್. ಕಳಸಾಪೂರ, ಸಾಂಸ್ಕೃತಿಕ ಕಾರ್ಯದರ್ಶಿ ಬಸವರಾಜ ಹೂಗಾರ, ಸಂಘಟನಾ ಕಾರ್ಯದರ್ಶಿ ದೀಪಕ್ ಮುತಾಲಿಕದೇಸಾಯಿ, ಜಿಲ್ಲಾ ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷ ಆರ್ ಎಚ್.ನೇಗಲಿ ಸೇರಿ ವಿವಿಧ ಇಲಾಖೆಯ ನೌಕರರು ಇದ್ದರು.

# ವಿಶ್ವಾಂಜನೇಯ ದೇವಸ್ಥಾನದಲ್ಲಿ ಅಧಿಕಮಾಸದ ಭಜನೆ

ಕಲಬುರಗಿ: ನಗರದ ವಿಶ್ವಾಂಜನೇಯ ದೇವಸ್ಥಾನದಲ್ಲಿ ಅಧಿಕ ಮಾಸದ ಅಂಗವಾಗಿ ಶ್ರೀ ವಿಶ್ವಾಂಜನೇಯ ಸೇವಾ ಸಮಿತಿ, ಸಂಸ್ಕಾರ ಭಾರತಿ ಹಾಗೂ ಶ್ರೀ ಭವಾನಿ ಶಂಕರ ಭಜನಾ ಮಂಡಳಿಯ ಸಂಂ–ಯುಕ್ತಾಶ್ರಯದಲ್ಲಿ ಭಕ್ತಿಭಾವಪೂರ್ಣ ಭಜನಾ ಕಾರ್ಯಕ್ರಮ ನಡೆಯಿತು.

ಅಧಿಕ ಮಾಸವು ಭಕ್ತಿ, ಪೂಜೆ ಹಾಗೂ ಪುಣ್ಯಕಾರ್ಯಗಳಿಗೆ ಮೀಸಲಾದ ಪವಿತ್ರ ಕಾಲವೆಂದು ಪರಿಗಣಿಸಲಾಗುತ್ತದೆ. ಈ ತಿಂಗಳಲ್ಲಿ ಶ್ರೀಹರಿಯ ನಾಮಸ್ಮರಣೆ ಮತ್ತು ಭಜನೆ ಮಾಡುವುದರಿಂದ ಮನಸ್ಸಿಗೆ ಶಾಂತಿ ಹಾಗೂ ಆತ್ಮಕ್ಕೆ ಶುದ್ಧಿ ದೊರೆಯುತ್ತದೆ ಎಂಬ ನಂಬಿಕೆ ಇದೆ. ಧರ್ಮ, ದಾನ ಮತ್ತು ಸತ್ಕಾರ್ಯಗಳಲ್ಲಿ ತೊಡಗುವುದ–ರಿಂದ ಜೀವನದಲ್ಲಿ ಸಕಾರಾತ್ಮಕತೆ ಹೆಚ್ಚುತ್ತದೆ ಎಂದು ಹಿರಿಯರು ಹೇಳುತ್ತಾರೆ. ವಿಶೇಷವಾಗಿ ಮಹಿಳೆಯರು ಈ ಮಾಸದಲ್ಲಿ ವ್ರತ, ಪೂಜೆ ಹಾಗೂ ಭಜನೆಗಳಲ್ಲಿ ಭಾಗವಹಿಸಿ ಕುಟುಂಬದ ಸುಖಶಾಂತಿಗಾಗಿ ಪ್ರಾರ್ಥಿಸುತ್ತಾರೆ. ದೇವರ ಕೃಪೆ ಮತ್ತು ಭಕ್ತರ ಏಕತೆ ಹೆಚ್ಚಿಸುವಲ್ಲಿ ಅಧಿಕ ಮಾಸದ ಆಚ–'ರಣೆಗಳು ಮಹತ್ವದ ಪಾತ್ರವಹಿಸುತ್ತವೆ.ಈ ಹಿನ್ನೆಲೆಯಲ್ಲಿ ಅಧಿಕಮಾಸದ ಪರ್ಯಂತ ಇಲ್ಲಿ ವಿಶೇಷ ಭಜನಾ ಕಾರ್ಯಕ್ರಮ ನಡೆಯುತ್ತಿದೆ. ಈ ಕಾರ್ಯಕ್ರಮದಲ್ಲಿ ಸಂಸ್ಕಾರ ಭಾರತಿ ಪ್ರಧಾನ ಕಾರ್ಯದರ್ಶಿ ಡಾ. ಅಂಬುಜಾ ಮಳಖೇಡಕರ, ಅಧ್ಯಕ್ಷರಾದ ಲೀಲಾವತಿ ಕುಲಕರ್ಣಿ, ಕೋಶಾಧ್ಯಕ್ಷ ಜಯಚಾರ್ಯ ಬಾಟೆ, ದೀಪಾ ಕುಲಕರ್ಣಿ, ಅನಿತಾ ಕುಲಕರ್ಣಿ, ಅಂಜನಾಬಾಯಿ ಕುಲಕರ್ಣಿ, ವಿಠ್ಠಲರಾವ ಕುಲಕರ್ಣಿ,



ಶ್ರೀಪತರಾವ ಗುಮಾಸ್ತೆ, ಗೋಪಾಲಕೃಷ್ಣ ಓಂಕಾರ, ವನಮಾಲಾಬಾಯಿ ಮಳಖೇಡ್ಕರ್, ಮಂಜುಳಾ ಜೋಶಿ, ಸುಧಾ ಜೋಶಿ, ಪದ್ಮಜಾ ಭೀಮಳ್ಳಿ, ಶರಣಮ್ಮಾ, ಸುಮಿತ್ರಾಬಾಯಿ, ವಿಜಯಲಕ್ಷ್ಮೀ ಗುಮಾಸ್ತೆ, ಪದ್ಮಜಾ ಕುಲಕರ್ಣಿ, ಭಾರ್ಗವಾ ಕುಲಕರ್ಣಿ, ಸರಿತಾ ಚಾಗಿ, ಜ್ಯೋತಿ ಚಾಗಿ, ಪೂಜಾ ವೀರೇಶ, ಜ್ಯೋತಿ ಪಟವರ್ಧನ, ಪ್ರತಿಭಾ ಅಜಯ ಹಾಗೂ ವಿಶ್ವರಾಧ್ಯ ಕಾಲೋನಿಯ ಮಹಿಳೆಯರು ಉಪಸ್ಥಿತರಿದ್ದರು.

# ಮಲಬಾರ್ ಚಾರಿಟೇಬಲ್ ಟ್ರಸ್ಟ್ ವಿದ್ಯಾರ್ಥಿನಿಯರಿಗೆ4.42 ಲಕ್ಷ ಮೊತ್ತದ ವಿದ್ಯಾರ್ಥಿವೇತನ ವಿತರಣೆ

ಬೀದರ್:ಸರಕಾರಿ ಪ್ರಥಮ ದರ್ಜೆ ಕಾಲೇಜು ನೌಬಾದ, ಬೀದರನಲ್ಲಿ ಇಂದು ದಿನಾಂಕ 20–5–2026 ರಂದು ಮಲಬಾರ್ ಚಾರಿಟೇಬಲ್ ಟ್ರಸ್ಟ್ ನ, ಮಲಬಾರ್ ಗೋಲ್ಡ್ & ಡೈಮಂಡ್ಸ್, ಬೀದರ್ ಸಂಸ್ಥೆಯು 'ಮಹಿಳಾ ಸಬಲೀಕರಣ' ಎಂಬ ಯೋಜನೆಯಡಿಯಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿನಿಯರ ಶಿಕ್ಷಣ, ವಸತಿ, ಉದ್ಯೋಗ, ಆರೋಗ್ಯ ಸಾಮಥ–್ಯ ವೃದ್ಧಿಸಲು ಬೀದರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನ್ನಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಭಾಲ್ಕಿ ಪ್ರಥಮ ದರ್ಜೆ ಕಲೇಜಿನ ಒಟ್ಟು 55 ಅರ್ಹ ವಿದ್ಯಾರ್ಥಿನಿಯರಿಗೆ 4 ಲಕ್ಷ 42 ಸಾವಿರ ಮೊತ್ತದ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಶೈನಿ ರಾಜೇಂದ್ರಕುಮಾರ ರಾಜ್ಯ ಸಲಹೆಗಾರ ಅಕ್ಕಪಡೆ ಇವರು ಆಗಮಿಸಿ ಮಾತನಾಡುತ್ತ "ಹಿಂದಿನ ಕಾಲದಲ್ಲಿ ಗನ್ ಹಿಡಿದುಕೊಂಡು ಯುದ್ಧ ಮಾಡುತ್ತಾ ಇದ್ದರು. ಆದರೆ ಇಂದು ನಾವು ನಾವು 'ಶಿಕ್ಷಣ' ವೆಂಬ ಗನ್ ಹಿಡಿದುಕೊಂಡು ಹೋರಾಡಬೇಕಾಗಿದೆ. ಅದಕ್ಕಾಗಿ ಎಲ್ಲರೂ ಚೆನ್ನಾಗಿ ಓದಬೇಕು. ಶಿಕ್ಷಣ ಕಲಿಕೆಯಿಂದಲೇ ಯಾವುದಾದರೂ ಉತ್ತಮ ಸ್ಥಾನ ಪಡೆಯಲು ಸಾಧ್ಯ ಎಂದರು.

ಯಾವ ಕೋರ್ಸ ಸಣ್ಣದಲ್ಲ. ಅದು ಕೀಳೆಂದು ಭಾವಿಸಬಾರದು. ಆರ್ಟ್ಸ್, ಸೈನ್ಸ್, ಕಾಮರ್ಸ್ ಯಾವದೇ ಇರಲಿ ಆ ವಿಷಯಗಳಲ್ಲಿ ಭಕ್ತಿ ಇಟ್ಟು ಓದಬೇಕು. ನಮ್ಮದೇ ಆದ ಪ್ರಯತ್ನದಿಂದ ಮುಂದೆ ಬರಬೇಕು. ನೀವು ಯಾವುದೇ ಕೋರ್ಸ್ ಮಾಡಿದರೂ ಸಹ ನಮ್ಮ ಮಲಬಾರ್ ಟ್ರಸ್ಟ್ ಸದಾಕಾಲ ಸಹಾಯ ಸಹಕಾರ ಮಾಡುತ್ತದೆ ಎಂದು ಹೇಳಿದರು".




ಇನ್ನೋರ್ವ ಅತಿಥಿಗಳಾದ ಬೀದರ ಮಹಾನಗರ ಪಾಲಿಕೆ ಮೇಯರ್ ಶ್ರೀ ಮಹಮ್ಮದ್ ಗೌಸ್ ಅವರು ಮಾತನಾಡುತ್ತ "ಮಹಿಳಾ ಸಬಲೀಕರಣ ಮಾಡುವ ಘನ ಉದ್ದೇಶವನ್ನು ಹೊತ್ತು ದೇಶದ ಮೂಲೆ ಮೂಲೆಗೆ ಹೋಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡಿ ಸಬಲೀಕರಣ ಗೊಳಿಸುತ್ತಿರುವ 'ಮಲಬಾರ ಟ್ರಸ್ಟ್'ನ ಕಾರ್ಯ ಶ್ಲಾಘನೀಯ. ಟ್ರಸ್ಟಗಳು ಇಂತಹ ಉತ್ತಮ ಕಾರ್ಯಗಳು ಮಾಡಬೇಕು " ಎಂದು ಸಲಹೆ ನೀಡಿದರು.

ಇನ್ನೋರ್ವ ಅತಿಥಿಗಳಾದ ಶ್ರೀ ಸಂಗೀತಾ ಎಮ್.ಬಿ ಪೊಲೀಸ್ ಸಹಾಯಕ ಉಪನಿರೀಕ್ಷಕರು ಬೀದರ ಹಾಗೂ ಅಕ್ಕ ಪಡೆ ಇವರು "ಕಾಲೇಜಿನಲ್ಲಿ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿ, ವಿದ್ಯಾರ್ಥಿನಿಯರು ಚೆನ್ನಾಗಿ ಓದಿ ಅಧಿಕಾ–ರಿಗಳಾಗಿ ಜೀವನದಲ್ಲಿ ಮುಂದೆ ಬರಬೇಕು. ಈ ಟ್ರಸ್ಟ್ ಮಾಡುತ್ತಿರುವಂತೆ ತಾವು ಸಹ ಸಹಾಯ ಮಾಡುವ ಸಾಮಥ್ರ್ಯ ಪಡೆಯಬೇಕೆಂದು" ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರಕಾರಿ ಪ್ರಥಮ ದರ್ಜೆ ಕಾಲೇಜು ನೌಬಾದ, ಬೀದರನ ಪ್ರಾಂಶುಪಾಲರಾದ ಪ್ರೊ. ಶಂಕರ ಕೆ. ಗಣಗೊಂಡ ಅವರು ಮಾತನಾಡುತ್ತ "ಮಹಿಳೆಯರನ್ನು ಸಬಲೀಕರಣ ಗೊಳಿಸಬೇಕೆಂಬ ಯೋಜನೆಯಡಿ ಮಲಬಾರ ಟ್ರಸ್ಟನವರು ಹಾಕಿಕೊಂಡ ಯೋಜನೆ ಉತ್ತಮವಾಗಿದ್ದು, ನಮ್ಮ ಕಾಲೇಜಿನ 23 ವಿದ್ಯಾರ್ಥಿನಿಯರಿಗೆ ಇದರ ಸದುಪಯೋಗವಾಗಿದ್ದು ನನಗೆ ಬಹಳ ಸಂತೋಷ ತಂದಿದೆ. ಟ್ರಸ್ಟಿಗೆ ಧನ್ಯವಾದಗಳು.

ಭಾರತ ದೇಶದಲ್ಲಿ ಅನೇಕ ಟ್ರಸ್ಟ್ ಗಳಿವೆ. ಆದರೆ ಅವು ಹೆಚ್ಚಾಗಿ ಇಂತಹ ಒಳ್ಳೆಯ ಕಾರ್ಯಕ್ಕೆ ಮುಂದೆ ಬರುವುದಿಲ್ಲ. ಕೆಲವು ಮಾತ್ರ ಟ್ರಸ್ಟ್ ಗಳು, ಸಂಸ್ಥೆಗಳು ಇಂಥ ಉತ್ತಮ ಕಾರ್ಯಗಳನ್ನು ಮಾಡುತ್ತಿವೆ. ಅಂಥ ಸಂಸ್ಥೆಗಳಲ್ಲಿ ಮಲಬಾರ್ ಟ್ರಸ್ಟ್ ಕೂಡ ಒಂದಾಗಿದ್ದು, ಅದು ಇನ್ನೂ ಉತ್ತಮ ಯೋಜನೆಗಳನ್ನು ಹಾಕಿಕೊಂಡು ಮುಂದೆ ಬರಲಿ. ವಿಶೇಷವಾಗಿ ಬಡತನದಲ್ಲಿ ಹುಟ್ಟಿಬೆಳೆದ ಮಕ್ಕಳ ಶಿಕ್ಷಣಕ್ಕಾಗಿ ಸದುಪಯೋಗವಾಗಲಿ" ಎಂದು ಹೇಳಿದರು.

ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಪಡೆದರು. ಈ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗ ಮುಖ್ಯಸ್ಥರಾದ ಡಾ . ರಾಜಕುಮಾರ ಅಲ್ಲೂರೆ, ಕ್ರೀಡಾ ವಿಭಾಗದ ಮುಖ್ಯಸ್ಥರಾದ ಡಾ. ಬಾಲಸುಬ್ರಮಣ್ಯಂ ಚಾಲಾಕ ಪ್ರಾಧ್ಯಾಪಕರುಗಳಾದ ಡಾ. ಅಶೋಕ್ ಕೋರೆ,ಡಾ .ಸುಚಿತಾನಂದ ಮಲ್ಕಾಪೂರೆ, ಪ್ರೊ.ಶ್ರೀಕಾಂತ ಪಾಟೀಲ,ಡಾ.ಎಲಿಶಾ ಡಿ.ಡಾ. ಈಶ್ವರಯ್ಯ ಕೋಡಂಬಲ್,ಮಲಬಾರ್ ಟ್ರಸ್ಟಿನ ಮುಖ್ಯಸ್ಥ ಶ್ರೀ ಜಿಷ್ಣು ಎನ್. ಸಾಜು ಸ್ಟೋರ್ ಹೆಡ್, ಮಾರುಕಟ್ಟೆ ಮ್ಯಾನೆಜರ್ ಅಬ್ದುಲ್ ಮುಬಿನ ಮೊದಲಾದ ಸಿಬ್ಬಂದಿಗಳು ಇದ್ದರು.


# ಅಣ್ಣ-ತಮ್ಮಂದಿರ ಬಂಧ; ಮಧುರ ಭಾವಾನುಬಂಧ

ಉದಯರಶ್ಮಿ ದಿನಪತ್ರಿಕೆ

**ಇಂದು (ಮೇ. 24, ರವಿವಾರ) "ರಾಷ್ಟ್ರೀಯ ಸಹೋದರರ ದಿನ. ಅದರ ಪ್ರಯುಕ್ತ ಈ ವಿಶೇಷ ಲೇಖನ)**

ಅಣ್ಣ.. ನೀ ಪ್ರಾಣವು ನನಗೆ, ನಿನ್ನೆದುರಲಿ ನಾನು, ನನ್ನೆದುರಲಿ ನೀನು, ಜೊತೆ ಜೊತೆಯಲಿ ಹೀಗೆ, ಇರುವೆ ಜೊತೆಗೆ, ಉಸಿರಾಗಿರು ಹೀಗೆ ಉಸಿರಾ ಜೊತೆಗೆ" ಎಂಬ ಹಾಡು ಅಣ್ಣ–ತಂಗಿಯರ ಜನುಮ ಜನುಮಗಳ ಅನುಬಂಧ, ಪ್ರೀತಿ, ಮಮತೆ ಮತ್ತು ಅಣ್ಣ–ತಂಗಿಯರ ನಡುವಿನ ಭಾವಬಂಧವನ್ನು ಅಭಿವ್ಯಕ್ತಗೊಳಿಸುತ್ತಾ, ಸಹೋದರತೆಯ ಅನ್ಯೋನ್ಯ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ತಪ್ಪು ಮಾಡಿಆಗ ಬೈದು ತಿದ್ದುವನು ನನ್ನಣ್ಣ, ದಾರಿ ಕಾಣದಾದಾಗ ಕೈ ಹಿಡಿದು ನಡೆಸುವನು ನನ್ನಣ್ಣ. ಕಷ್ಟದಲ್ಲಿದ್ದಾಗ ಧೈರ್ಯ ತುಂಬುವನು ತಂದೆಯ ಕಾಳಜಿ ನೀಡಿ ಜೋಪಾನ ಮಾಡುವನು. ಕೆಲವು ಸಲ ನಮಗೆ ತಂದೆ–ತಾಯಿಯ ಮುಂದೆ ಹೇಳಲಿಕ್ಕೆ ಆಗದ ಕೆಲವೊಂದು ವಿಷಯಗಳಿದ್ದಾಗ ಆ ಮಾತುಗಳನ್ನು ನಿಜವಾಗಿಯೂ ಸಹೋದರ ಕೇಳುವವನಾಗುತ್ತಾನೆ. ಏನೋ ಸಮಸ್ಯೆ ಬಂದಾಗ, ತಪ್ಪು ಮಾಡಿದಾಗ ಅಥವಾ ಅಂತರಾಳದಲ್ಲಿ ಉಂಟಾಗುವ ಬದಲಾವಣೆಗಳನ್ನು ನೇರವಾಗಿ ಹಿರಿಯರಿಗೆ ಹೇಳಲು ಸಾಧ್ಯವಿಲ್ಲ.

ಹಿರಿಯಣ್ಣನ ಸ್ಥಾನದಲ್ಲಿ ನಿಂತು




ತಾಳ್ಮೆಯಿಂದ ಕೇಳಿ ಅದಕ್ಕೊಂದು ಪರಿಹಾರ ಸೂಚಿಸುವವನೇ ಸಹೋದರ ಅಥವಾ ಅಣ್ಣನೇ ಆಗಿರುತ್ತಾನೆ. ಅವನು ಅಣ್ಣನಾಗಿರಬಹುದು ಅಥವಾ ತಮ್ಮನಾಗಿರಬಹುದು. ಆ ಕ್ಷಣಕ್ಕೊಂದು ಸಮಾಧಾನ ಮಾಡುವ ಮತ್ತು ಸಾಂತ್ವನ ನೀಡುವ ವ್ಯಕ್ತಿಯೇ ಸಹೋದರ. ಮನೆಯಲ್ಲಿ ಒಬ್ಬರಿರಲಿ ಅಥವಾ ಇಬ್ಬರು ಸಹೋದರರು ಇರಲಿ ಅಥವಾ ಸಹೋದರರೇ ಇಲ್ಲದಿರಲಿ ನಾವು ಎಲ್ಲರಲ್ಲೂ ಸಹೋದರತೆ ಮತ್ತು ಸಹೋದತ್ವದ ಭಾವದಿಂದ ಕಾಣಬೇಕು ಮತ್ತು ಪ್ರೀತಿಯ ಸಹಬಾಳ್ವೆಯಿಂದ ಬದುಕಬೇಕು.

ಭಾವನಾತ್ಮಕ ಪ್ರೀತಿ ಮತ್ತು ಸಹೋದರತೆಯ ಬಾಂಧವ್ಯವನ್ನು ಗಟ್ಟಿಗೊಳಿಸುವಂತಾಗಲಿ: ಸಹೋದರರೆಂದರೆ ಕೇವಲ ಒಡಹುಟ್ಟಿದವರು ಅಥವಾ ರಕ್ತ ಸಂಬಂಧಿಗಳಾಗಿರಬೇಕೆಂದಿಲ್ಲ. ಇತ್ತೀಚೆಗೆ ಹೊಸದಾಗಿ ಹುಟ್ಟಿಕೊಂಡಿರುವ ಟ್ರೆಂಡ್ 'ಬ್ರೋ' ಹೆಚ್ಚು ಮಹತ್ವ ನೀಡುತ್ತಿರುವ ಈಗಿನ ವಿಶೇಷವಾಗಿದೆ. ಇಡೀ ವಿಶ್ವದೆಲ್ಲೆಡೆ ಎಲ್ಲರಲ್ಲಿಯೂ ಸಹೋದರತೆ, ಸಹೋದರತ್ವ ಮತ್ತು ಭ್ರಾತೃತ್ವದ ಭಾವವನ್ನು ಒಡಮೂಡಿಸಲು ಮತ್ತು ಕುಟುಂಬದಲ್ಲಿ ಪ್ರೀತಿ–ವಾತ್ಸಲ್ಯ, ಮಮತೆ, ಅನ್ಯೋನ್ಯತೆ, ಸುಮಧುರ ಬಾಂಧವ್ಯವನ್ನು ಗಟ್ಟಿಗೊಳಿಸಲು ಮತ್ತು ಅಣ್ಣ–ತಮ್ಮಂದಿರ ತ್ಯಾಗವನ್ನು ಸ್ಮರಿಸಲು ಪ್ರತಿ ವರ್ಷ ಮೇ 24 ರಂದು ಜಾಗತಿಕವಾಗಿ 'ಸಹೋದರರ ದಿನ' ವನ್ನು ಆಚರಿಸಲಾಗುತ್ತಿದೆ. ಒಬ್ಬ–ರಿಗೊಬ್ಬರು ಪರಸ್ಪರ ಅರ್ಥೈಸಿಕೊಂಡು ತಮ್ಮ ಅನು–ತನು ಹಂಚಿಕೊಳ್ಳುವ ಮತ್ತು ಆಪತ್ತು ಬಂದಾಗ ಸಹಾಯ–ಸಹಕಾರ ನೀಡುವ ಮನೋಭಾವವನ್ನು ಬೆಳೆಸುವುದರ ಮೂಲಕ ಸಹೋದರತ್ವದ ಭಾವ ಮೂಡಿಸಿ, ಭಾವಾನುಬಂಧವನ್ನು ಗಟ್ಟಿಗೊಳ್ಳಬೇಕೆಂಬುದೇ ಈ ದಿನದ ಆಚ–'ರಣೆಯ ಪ್ರಮುಖ ಉದ್ದೇಶವಾಗಿದೆ.


ಅಣ್ಣ–ತಮ್ಮಂದಿರರಲ್ಲಿ ಭ್ರಾತೃತ್ವ ಭಾವ ಮತ್ತು ಭಾವಾನುಬಂಧ ಬೆಸೆಯಲಿ: ಮೇ 24, 2005 ರಂದು ಯುನೈಟೆಡ್ ಸ್ಟೇಟ್ಸ್ (ಅಮೇರಿಕಾ) ದಲ್ಲಿ ಮೊಟ್ಟಮೊದಲು ಅಲಬಾಮಾ ಮೂಲದ ಸಿ. ಡ್ಯಾನಿಯಲ್ ರೋಡ್ಸ್ ಎಂಬುವವರು ಈ 'ಸಹೋದರರ ದಿನ' ವನ್ನು ಆಚರಿಸಲು ಕರೆ ಕೊಟ್ಟರು. ಯು.ಎಸ್.ಎ. ಮೊದಲ ಸಹೋದರ ಸಂಘಟನೆ ಫ್ರೀಮಾಸನ್ಸ್ ಸ್ಥಾಪನೆಯನ್ನು ದಿನವನ್ನು ಸ್ಮರಿಸುವ ದಿನವೇ ಈ ಸಹೋದರರ ದಿನ. ಅಣ್ಣ–ತಮ್ಮಂದಿರ ನಡುವಿನ ಪ್ರೀತಿ, ಸಹಕಾರ, ತ್ಯಾಗಕ್ಕೆ ಗೌರವ ನೀಡುವ ದಿನ ಇದಾಗಿದೆ. ಸಹೋದರ–ಸಹೋದರಿಯರ ನಡುವಿನ ಅವಿನಾಭಾವ ಸಂಬಂಧ ಮತ್ತು ಭ್ರಾತೃತ್ವದ ಭಾವ ಬೆಸೆಯುವ ಅನುಬಂಧವಾಗಿದೆ. ನಮ್ಮ ಸಹೋದರರೊಂದಿಗಿನ ಸಂಬಂಧಗಳನ್ನು ಪಾಲಿಸಲು ಮತ್ತು ನಮ್ಮ ಜೀವನಕ್ಕೆ ಸಂತೋಷ




ಮತ್ತು ಬೆಂಬಲವನ್ನು ತರುವ ಜೀವಮಾನದ ಸಂಪರ್ಕವನ್ನು ಬಲಪಡಿಸಲು ಈ ದಿನವು ನೆನಪಿಸುತ್ತದೆ.

ಸಹೋದರತ್ವದ ಸುರಕ್ಷೆಯ ಸಂಕೇತ ಮತ್ತು ಭಾವನೆ–ಬಾಂಧವ್ಯ ಗಟ್ಟಿಗೊಳಿಸುವ ವೃದ್ಧಿಸುವಂತಾಗಬೇಕು: ಬಾಲ್ಯದ ಆಟದ ಸಂಗಾತಿಯಾಗಿ, ಕಷ್ಟ–ಸುಖಗಳಲ್ಲಿ ಜೊತೆಯಾಗಿ ನಿಲ್ಲುವ ಅಣ್ಣ–ತಮ್ಮಂದಿರ ಅಮರ ಮತ್ತು ಮಧುರ ಪ್ರೀತಿಯನ್ನು ಗೌರವಿಸುವ ದಿನವೇ ಈ ಸಹೋದರರ ದಿನ. ನಮ್ಮ ಭಾರತೀಯ ಸಂಸ್ಕೃತಿಯ ರಕ್ಷಾ ಬಂಧನ ಹಬ್ಬದಲ್ಲಿ ಸಹೋದ–ರಿಯರು ತಮ್ಮ ಸಹೋದರರ ಕೈಗೆ ರಾಖಿ ಕಟ್ಟುವ ಮೂಲಕ ಅಣ್ಣಂದಿರ ಯಶಸ್ಸು, ಆರೋಗ್ಯ, ಶ್ರೇಯೋಭಿವೃದ್ಧಿ, ರಕ್ಷಣೆ ಹಾಗೂ ನೆಮ್ಮದಿ ಕರುಣಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ತಂಗಿಯು ಅಣ್ಣ ಅಥವಾ ತಮ್ಮನಿಗೆ ರಾಖಿಯನ್ನು ಕಟ್ಟಿ ಆರತಿ ಮಾಡಿ, ಸಹೋದರನ ಆರ್ಶೀವಾದ ಬೇಡುತ್ತಾಳೆ. ಈ ದಿನವು ತಂಗಿಯ ರಕ್ಷಣೆ ಅಣ್ಣನಿಂದ, ಅಣ್ಣನ ರಕ್ಷಣೆ ತಂಗಿ ಯಿಂದ ಮತ್ತು ಸಹೋದರರ ರಕ್ಷಣೆ ಎಂಬ ಭಾತೃತ್ವದ ಭಾವ ಬೆಸೆಯುವ ಅನುಬಂಧವಾಗಿದೆ. ಅಣ್ಣ–ತಂಗಿಯರ ನವಿರಾದ ಭಾವನೆಗಳನ್ನು ಗಟ್ಟಿಗೊಳಿಸುವ, ಬಾಂಧವ್ಯ ವೃದ್ಧಿಸುವ ಹಾಗೂ ಸಹೋದರತೆಯ ಸಂಕೇತವಾಗಿ ಆಚ–ರಿಸಲಾಗುತ್ತಿರುವ ಸಹೋದರ–ಸಹೋದ–ರಿಯರ ಸಂಬಂಧಗಳನ್ನು ಗಟ್ಟಿಗೊಳಿಸುವ ಮತ್ತು ಸಹೋದರತ್ವದ ಸುರಕ್ಷೆಯ ಸಂಕೇತವಾಗಿದೆ.



2026 ನೇಯ ವರ್ಷದ ಘೋಷವಾಕ್ಯ "ಭಾವನಾತ್ಮಕ ಮತ್ತು ಸ್ನೇಹಪರವಾದ ಬಾಂಧವ್ಯವನ್ನು ಬಲಪಡಿಸುವುದು" ಈ ವರ್ಷದ ಆಚರಣೆಯ ಧ್ಯೇಯವಾಕ್ಯ. ಇದರಿಂದ ಅಣ್ಣ–ತಮ್ಮಂದಿರು ತಮ್ಮ ಹಳೆಯ ನೆನಪುಗಳ ಮೆಲುಕು ಹಾಕುತ್ತಾ, ಸದಾ ನಗು–ನಗುತ್ತಾ, ಸಹೋದರರ ನಡುವೆ ಅನ್ಯೋನ್ಯತೆ ಮತ್ತು ಸುಮಧುರ ಬಾಂಧವ್ಯವನ್ನು ಬೆಸಯುವಂತೆ ಬದುಕಬೇಕು. ಮುಂದೆ ಬಂದಾಗ ಶುಭ ಕೋರುವುದು, ಒಳ್ಳೆಯ ಮಾತುಗಳನ್ನಾಡುವುದು ಅಥವಾ ಕೇಕ್ ಕತ್ತರಿಸಿದರೆ ಅಥವಾ ಉಡುಗೊರೆಗಳನ್ನು ನೀಡಿದರೆ ಈ ದಿನದ ಆಚರಣೆಯು ಅಥ–'ರ್ಪೂರ್ಣವಾಗುವುದಿಲ್ಲ. ಅಣ್ಣ–ತಮ್ಮ ಎಲ್ಲೇ ಇರಲಿ, ಹೇಗೆ ಇರಲಿ, ಸದಾ ಸುಖವಾಗಿರಲಿ ಮತ್ತು ಕಷ್ಟದ ಕಾಲದಲ್ಲಿ ಸಹಾಯ–ಸಹಕಾರ ನೀಡುವ ಭಾವ ಒಡಮೂಡಬೇಕು. ಅಂದಾಗ ಮಾತ್ರ ಈ ದಿನದ ಆಚರಣೆಯು ಮೌಲ್ವಿಕ ಸಂದೇಶವನ್ನು ಕೊಡುತ್ತದೆ.

ಕೊನೆಯ ನುಡಿ

ಥಾಮಸ್ ಕಾರ್ಲೈಲ್ ಅವರು, "ಸಹೋದರತ್ವವು ಆಜ್ಞೆಗಿಂತ ಮಾದ–ರಿಗಿಂತ ಚೆನ್ನಾಗಿ ಅಥ–'ರ್ಮಾಡಿಕೊಳ್ಳಬಹುದಾದ ಆದರ್ಶವಾಗಿದೆ" ಎಂದು ಹೇಳಿದ್ದಾರೆ. ನೈಜವಾಗಿ ಕುಟುಂಬದ ಸದಸ್ಯರ, ಸಹೋದರರ, ಅಣ್ಣ–ತಮ್ಮಂದಿರ ಮತ್ತು ಸಹೋದರಿಯರ ನಡುವಿನ ಅನ್ಯೋನ್ಯ ಸಂಬಂಧ, ಸುಮಧುರ ಬಾಂಧವ್ಯ, ಪ್ರೀತಿ–ವಾತ್ಸಲ್ಯ ಮತ್ತು ಸಹೋದರತೆಯನ್ನು ರಕ್ಷಿಸುವಂತಾಗಬೇಕು. ಕಷ್ಟಕಾಲದಲ್ಲಿ ಇದ್ದಾಗ ಅವರು ಬೆನ್ನೆಲುಬಾಗಿ ನಿಂತು ಸಹಾಯ ಮಾಡುವ ಸಹೋದರತ್ವದ ಭಾವವನ್ನು ಅಭಿವ್ಯಕ್ತಗೊಳಿಸಬೇಕು. ಪರಿಶುದ್ಧ ಪ್ರೀತಿ ನೀಡುವ ಸಹೋದರರ ಬಾಂಧವ್ಯವನ್ನು ಗೌರವಿಸುವ ಈ ದಿನದ ಆಚರಣೆಯು ಕೇವಲ ದಿನಾಚರಣೆಗೆ ಮಾತ್ರ ಸೀಮಿತವಾಗಬಾರದು. ಅದು 'ಹುಟ್ಟಿನಿಂದಲೇ ಅಣ್ಣ–ತಮ್ಮಂದಿರು ಬೆಳೆಯುತ್ತಲೇ ದಾಯಾದಿಗಳು' ಅಂತ ಆಗಬಾರದು. ಪ್ರತಿ ಮನೆಯಲ್ಲಿ ಪ್ರೀತಿ–ಪ್ರೇಮ, ಮಮತೆ, ಸಹಾಯ–ಸಹಕಾರದಿಂದ ಸಹಬಾಳ್ವೆ ಮಾಡುವ ಮತ್ತು ನೋವು–ನಲಿವು, ಸುಖ–ದುಃಖದಲ್ಲಿ ಭಾಗಿಯಾಗುವ ಮತ್ತು ಪರಸ್ಪರ ಹಂಚಿಕೊಂಡು ಸಂತೈಸುವ ಮನಸ್ಸು ನಮ್ಮದಾಗಬೇಕು. ಪ್ರೀತಿಯಿಂದ ಕಾಣುವ ಮತ್ತು ಗೌರವಿಸುವ ಭಾವ ಎಲ್ಲರಲ್ಲಿ ಮೂಡಬೇಕು ಅಂದಾಗ ಮಾತ್ರ ಈ ದಿನದ ಆಚರಣೆಯು ಅರ್ಥಪೂರ್ಣವಾಗುವುದು ಎಂಬುದೇ ನನ್ನ ಆಶಯ.

ಲೇಖನ
ಮಲ್ಲಪ್ಪ. ಸಿ. ಖೊದ್ನಾಪೂರ
(ತಿಕೋಟಾ)
ವಿಜಯಪುರ



# ಒಲವಿನ ಮಿನುಗುತಾರೆಗೆ ಒಲವಿನೋಲೆ

■ ಉದಯರಶ್ಮಿ ದಿನಪತ್ರಿಕೆ


ಮುಸ್ಸಂಜೆಯ ಮಲ್ಲಿಗೆಯಂತಹ ವೇದಿಕಾ

ಈ ಒಲವಿನೋಲೆ ಮಿನುಗುತಾರೆಯಾದ ನಿನಗೆ ಮುದ್ದಾಂ ಬರೆದದ್ದಲ್ಲ. ಇದೊಂದು ಪೋಣಿಸಿದ ಸಾಲುಗಳ ಭಾವತೀರದ ಪಿಸುಮಾತು.

ಇದುವರೆಗೂ ಖಾಲಿಯಿದ್ದ ಎದೆಗೂಡಿಗೆ ಸದ್ದಿಲ್ಲದೆ ಬಂದು ನನ್ನನ್ನಾವರಿಸಿ, ನೀಳ ತೋಳುಗಳಿಂದ ಕೊರಳ ಬಳಸಿ, ಟ್ರಿಮ್ ಮಾಡಿದ ಗಡ್ಡದ ಕೆನ್ನೆಗೆ ಸವಿಮುತ್ತನ್ನಿಕ್ಕಿ, ಐಲವ್ಯೂ ಎಂದು ಕಿವಿಯಲುಸಿರಿ, ಚಿಕ್ಕದಾಗಿ ಕಿವಿ ಕಚ್ಚಿ., ನನ್ನೆದೆಗೆ ಒರಗಿ ನಾಚಿ ಮಾದಕ ಕಂಗಳಲಿ ಸಲ್ಲಾಪಕ್ಕೆ ಕರೆದೆ. ಇದಕ್ಕೆಲ್ಲ ಹಾರಿ ಹೋದ ಜೋಡಿಹಕ್ಕಿಗಳು ಮರಳಿ ಬಂದು ಗೂಡಲ್ಲಿ ನಡೆಸಿದ ಕಚ್ಚಿ ಕುಚ್ಚಿ ಪ್ರೇರಣೆಯಾಗಿ-ತ್ತು ಅಂತ ನನಗೆ ಗೊತ್ತು. ರೆಪ್ಪೆ ಮುಚ್ಚಿ ಪ್ರೀತಿಯಾಟದ ಆಳಕ್ಕೆ ಇಳಿದಷ್ಟು ನಾಚಿಕೆ ಕಳಚಿ ಬಿದ್ದಿತ್ತು ಅಂದು.

ಇಂದು ಒಂದೊಂದು ನೆನಪೂ ಒಂದೊಂದು ಸಂಭ್ರಮ. ಮನದ ಕಣಿವೆಯಲಿ ತುಡಿತ ಮಿಡಿತಗಳ ತುಂತುರು ಹನಿಗಳ ಉದುರಿಸುತಿದೆ. ಪ್ರೀತಿಯ ಜೇನು ಜಿನುಗುತಿದೆ. ಸವಿನೆನಪುಗಳ ಗಂಟು ಬಿಚ್ಚಿದೆ. ಮೆಲಕು ಹಾಕುವುದೊಂದೇ ಫುಲ್ ಟೈಂ ಕೆಲಸವಾಗಿದೆ. ಸೋನೆ ಹನಿಗಳು ಮತ್ತಷ್ಟು ನಿನ್ನನ್ನು ನೆನಪಿಸಿವೆ. ಮೂಡಣದಲ್ಲಿ ಮೂಡಿದ ಹೊನ್ನ ಕಿರಣಗಳ ಪ್ರಭೆಯು ಮನವನ್ನು ತಣಿಯುವಂತೆ ಮಾಡಿದೆ. ಮುತ್ತಿದ ಆಸೆಯಲಿ ತನುವು, ಮೋಡ ಕಂಡ ಗರಿ ತೆರೆದ ನವಿಲಿನಂತೆ ನರ್ತಿಸುತ್ತಿದೆ. ನೀನಿರದ ಸಮಯದಿ ಆಡದೇ ಉಳಿದಿಹ ಮಾತುಗಳೂ ಮೌನವಾಗಿ ಉಳಿದಿವೆ. ಎದೆಯಂಗಳದಲ್ಲಿ ನಿನ್ನದೇ ಪ್ರೀತಿಯ ಹಸಿರು ಚಿಗುರಿದೆ. ಅವಿತಿಟ್ಟ ಹೂಮುತ್ತುಗಳನ್ನೆಲ್ಲ ಬಿಸಿ ಮೈಗೆ ಒಂದೊಂದಾಗಿ ಮೃದುವಾಗಿ ಹಂಚಲು, ವಿರಹದುರಿಗೆ ಮದ್ದು ಅರಿಯಲು ಕಾದಿದೆ. ಮನದ ಅಂತಃಪುರದ ಕನಸಿನ ಎಳಕಾದ ಎಸಳುಗಳು ನಿನಗಾಗಿ ಕಾಯುತಿವೆ ಪ್ರಾಣ ಸಖಿ.

ಪ್ರೀತಿಸುವುದು ಸುಲಭವೆಂದು ಕಂಡರೂ ಸುಲಭವಲ್ಲ. ಪ್ರೀತಿಯಲ್ಲಿ ಕಷ್ಟ ನೋವು ಅವಮಾನಗಳು ಸಾಮಾನ್ಯ, ಕೆಲವ-ರಿಗೆ ಮಾತ್ರ ಒಲಿಯುವ ಒಲಿನಲಿ, ಒಲವಿನ ರಾಣಿಯ ಒಲವಿನ ಕಣಜ ಸಿಗುವುದು. ಒಲವಿನ ಕಣಜ ಪಡೆಯುವಲ್ಲಿ ಬಹುತೇಕರು ಜಾತಿ ಧರ್ಮ ಹಣ ಅಂತಸ್ತಿನ ಹೆಸರಿನಲ್ಲಿ ಎಡುವುತ್ತಿದ್ದಾರೆ. ಪ್ರೀತಿಯೆಂದರೆ ಜಾತಿ ಧರ್ಮದ ಕಟ್ಟುಪಾಡುಗಳನ್ನು ಸ್ವೀಕರಿಸದೆ ಮನಷ್ಯರನ್ನಾಗಿಸುವ ಸ್ನೇಹ, ಅದೊಂದು ಧ್ಯಾನ, ಆತ್ಮಾನುಸಂಧಾನ ಒಂದು ಹೃದಯ ಇನ್ನೊಂದು ಹೃದಯವನ್ನು ಅರಿಯುವ ಪ್ರಕ್ರಿಯೆ. ಮೃದು ಮಧುರ ಭಾವನೆಗಳೊಂದಿಗೆ ಬಾಳನು ಹೆಣೆದುಕೊಳ್ಳುವ ಕ್ರಿಯೆ. ನಕ್ಷತ್ರಗಳ ರಾಶಿಯ ಕೆಳಗೆ ಮೈ ಚಾಚಿ ನಲಿವಿನಲಿ ಮೋಹಕ ಪ್ರೀತಿಯ ಪಿಸುಮಾತುಗಳ



ಉಸುರುವುದು.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹೃದಯಗಳನ್ನು ಬೆಸೆಯುವ ಒಂದು ಅದ್ಭುತ ಶಕ್ತಿ. ಕಷ್ಟಗಳು ತುಂಬಿದ ಕಡಲಿನ ಬದುಕನ್ನು ದಡ ಸೇರಿಸುವ ಸುಖದ ಹಾಯಿದೋಣಿ. ಪ್ರೀತಿ ತೀರಾ ಸುಲಭದ ಮಾತಲ್ಲ. ಅದನ್ನು ತೀರಾ ಹಗುರವಾಗಿ ತೆಗೆದುಕೊಂಡರೆ ಜೀವನದ ಕಥೆ ಮುಗಿದೇ ಹೋಯಿತು ಎಂದರ್ಥ. ಎಲ್ಲವೂ ಬದಲಾಗುತ್ತಿದೆ ಎಲ್ಲರೂ ಬದಲಾಗಿದ್ದಾರೆಂದು ಹಸಿ ಸುಳ್ಳು ಹೇಳಿ ಹುಸಿ ಪ್ರೀತಿ ಮಾಡಿದರೆ ಜೀವನದ ಹಳಿ ತಪ್ಪುವುದು ಖಂಡಿತ. ಎಂದೆಲ್ಲ ಬದುಕಿನ ಸಾಕಷ್ಟು ಸತ್ಯಗಳನ್ನು ಮನ ಮುಟ್ಟುವ ಹಾಗೆ ಹೇಳಿದ




ಜೀವದ ಗೆಳತಿ ನೀನು.

ಅದೊಂದು ಸುಂದರ ದಿನ ಹೊರಗೆ ಸಂಜೆ ನಿಧಾನವಾಗಿ ಕತ್ತಲನ್ನು ಅಪ್ಪಿಕೊಳ್ಳುತ್ತಿತ್ತು. ಹೆದರಿದ ಜಿಂಕೆಯ ಕಂಗಳಲ್ಲಿ ನಿನ್ನ ಕಾಡಿಗೆ ಕಣ್ಣುಗಳ ನೋಟ ಕೈ ಬೀಸಿ ಕರೆದಂತೆ ಭಾಸವಾಯಿತು. ಚಂದ್ರನಂತಹ ಮುಖ, ತಾವರೆಯ ಕಣ್ಣು, ಕಾರ್ಗತ್ತಲಿನಂತಹ ಕೇಶ ಚೆಂದುಳ್ಳಿ ಚೆಲುವೆಯಂತಹ ನಿನ್ನ ಮೈಮಾಟ ಕವಿಯ ಕಲ್ಪನೆಗೆ ಕನ್ನಡಿ ಹಿಡಿದಂತಿರುವ ರೂಪ ರತ್ನ. ನಿನ್ನ ಸೌಂದರ್ಯವನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಲು ಕಾಳಿದಾಸನಿಗೆ ಮಾತ್ರ ಸಾಧ್ಯ. ನನ್ನ ಮಾತುಗಳೆಲ್ಲ ಸೋತು ಸುಮ್ಮನಾಗಿವೆ. ಹೀಗಿದ್ದಾಗಲೂ ನಿನ್ನ ಕಂಗಳು ಮೌನ ನಗುವ ಚೆಲ್ಲಿ, ಬೆರಳುಗಳು ನನ್ನ ಸೊಂಪಾದ ಕೂದಲನ್ನು ನೇವರಿಸುತ್ತಿವೆ. ಆ ಸಂಜೆ ಇರುಳು ಸಂಪೂರ್ಣವಾಗಿ ನನ್ನವಳಾಗಲು ಕಾದಂತಿರುವೆ ಎಂದು ನಾನು ಕಾಲೆಳೆದೆ 'ಹುಚ್ಚ ನೀನು' ಎಂದು ಕಿರುನಗೆ ಚೆಲ್ಲಿ ಭುಜದ ಮೇಲೆ ಅಂದದ ಸಿರಿದೇವಿಯಂತಹ ಮೊಗವನ್ನಿಟ್ಟು ಲಘುವಾಗಿ ತಬ್ಬಿಕೊಂಡು ಮೌನದಲ್ಲೇ ಅಗಾಧ ಭರವಸೆಯನ್ನಿತ್ತೆ. ಕೆಲವೊಮ್ಮೆ ಪ್ರೀತಿಗೆ ಮಾತುಗಳ ಹಂಗು ತೊರೆದ ಮೌನದ ಗಾಢವಾದ ಆಲಿಂಗನವೇ ಒಳಿತು ಎಂದೆನಿಸಿಬಿಡುತ್ತದೆ. ಆ ಆಲಿಂಗನಕೆ ಇನ್ನಿಲ್ಲದಂತೆ ಕಾಯುತಿದೆ.

ಮದುವೆಗಳು ಮೊದಲೆಲ್ಲ ಕಡುಬೇಸಿಗೆಯ ದಿನಗಳಲ್ಲಿ ಮನೆಯ ಮುಂದೆ ಹಂದರದಲ್ಲಿ ಊರೆಲ್ಲ ಮೆರವಣಿಗೆಯಲ್ಲಿ ಬಹು ಸಡಗರದಿಂದ ನಡೆಯುತ್ತಿದ್ದವು. ಬೀಗರ ಬಿಜ್ಜರು ತಿಂಗಳಾನುಗಟ್ಟಲೇ ಮನೆಯಲ್ಲಿ ಟಿಕಾಣಿ ಹೂಡಿ ಊರಿನವರೆಲ್ಲ ಸಂಭ್ರಮದಿಂದ ಅತ್ಯುತ್ಸಾಹದಿಂದ ನವ ವಧುವರರ ಹೊಸ ಬಾಳಿಗೆ ಸಾಕ್ಷಿಯಾಗುತ್ತಿದ್ದರು..ಆದರೀಗ ಮದುವೆ ಮನೆಯಂಗಳ ದಾಟಿ ಕಲ್ಯಾಣ ಮಂಟಪಕ್ಕೆ ಕಾಲಿಟ್ಟಿವೆ. ಅನಗತ್ಯ ಆಡಂಬರ ದುಬಾರಿ ವೆಚ್ಚ ಬದಿಗೊತ್ತಿ ಮಿತವ್ಯಯದಲ್ಲಿ ವಿವಾಹ ಬಂಧನದಲ್ಲಿ ಬಂಧಿಯಾಗುವಾ. ರಾಷ್ಟ್ರಕವಿ ಕುವೆಂಪು ಅವರು ರೂಪಿಸಿದ ವೈಚಾ-



ರಿಕ ವಿವಾಹ ಪದ್ಧತಿಯಂತೆ ಮುಹೂರ್ತದ ಹಂಗಿಲ್ಲದೆ ಪರಸ್ಪರ ಪ್ರಮಾಣ ವಚನ ಸ್ವೀಕರಿಸಿ ರೆಜಿಸ್ಟರ್ ಮದುವೆಯಾಗುವಾ ಎನ್ನುವ ನಿನ್ನ ವಿಚಾರ ಎಲ್ಲರಿಗೂ ಬಂದರೆ ಎಷ್ಟು ಚೆನ್ನ ಚೆಲುವೆ! ಮದುವೆಗಾಗಿ ಸಾಲ ಮಾಡಿ ಜೀವನಪೂರ್ತಿ ಅದನ್ನು ತೀರಿಸಲು ಕಷ್ಟಪಡುವುದು ತಪ್ಪುತ್ತದೆ. ಆಡಂಬರಕ್ಕೆ ಖರ್ಚು ಮಾಡುವ ಹಣವನ್ನು ಮುಂದಿನ ಸುಂದರ ಜೀವನಕ್ಕೆ ಬಳಸಬಹುದೆನ್ನುವ ನಿನ್ನ



ನಿಲುವು ನನ್ನ ನಿನ್ನ ಹೆತ್ತವರು ಒಪ್ಪಿಯಾಗಿತ್ತು.

ಮದುವೆ ದಿನ ನಿನ್ನುಡುಗೆ ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯ ಮಿಶ್ರಣವಾಗಿತ್ತು. ಲೈಟ್‌ವೇಟ್ ಪೀಚ್ ಬಣ್ಣದ ಲೆಹೆಂಗಾ, ಕಣ್ಣುಗಳಿಗೆ ಸಾಫ್ಟ್ ಶೀಮರ್, ತುಟಿಗಳಿಗೆ ಗ್ಲಾಸಿ ಲಿಪ್‌ಸ್ಟಿಕ್, ಸ್ಫಟಿಕದಂತೆ ಶುಭ್ರವಾದ ಮುಖ, ಕೆನ್ನೆಗೆ ತಿಳಿ ಗುಲಾಬಿ ಬ್ಲಷ್, ಭಾರವಾದ ಆಭರಣಗಳ ಬದಲಾಗಿ ಲೈಟ್ ಜ್ಯುವೆಲರಿ ಮಾತ್ರ ಧರಿಸಿದ್ದೆ ಹೀಗಾಗಿ ನಿರಾಭರಣ ಸುಂದರಿಯಾಗಿ ಧರೆಗಿಳಿದ ಅಪ್ಸರೆಯಂತೆ ಎಲ್ಲರ ಕಣ್ಮನ ಸೆಳೆದಿದ್ದೆ. ನಿನ್ನನ್ನು ಸಂಗಾತಿಯಾಗಿ ಪಡೆಯುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದೆನಿಸಿದ ಕ್ಷಣವದು.

ನೀನಿಲ್ಲದೇ ಕಪ್ಪು ರಾತ್ರಿ ಕಳೆಯುತ್ತಿರುವೆ. ಸನಿಹ ಬಂದರೆ ನಿನ್ನ ಕಂಗಳ ದೀಪದಡಿಯಲ್ಲಿ ದಾಹ ತೀರದ ಮಡಿಲೊಳಗೆ ಬೆಳ್ಳನೆಯ ಹಣೆ ಕುತ್ತಿಗೆ ಎದೆ ಹೊಕ್ಕಳಿಗೆಲ್ಲ ತುಟಿಗಳ ಮುದ್ರೆ ಒತ್ತುವೆ. ಗಡಗಡಿಸುವ ಚಳಿಯ ಛಳುಕಿಗೆ ಬಳ್ಳಿಯಂತೆ ಬಳಕುವ ನಡುವನು ಬಳಸುವ ಕನವರಿಕೆ ದಿನದಿನಕ್ಕೆ ಹೆಚ್ಚುತ್ತಿದೆ. ಅರ್ಧರಾತ್ರಿಯಲ್ಲಿ ಮುಚ್ಚಿದ ಬಾಗಿಲೊಳಗೆ ಅಧರಗಳ ನಡುಕದಲಿ ಪಾದಗಳ ಬೆರಳುಗಳನು ಹಾಗೆ ಮೀಟಿ ನಟ್ಟ ನಡುವೆ ಹೀಗೆ ದಾಟಿ ಶೃಂಗಾರ ಸಾಗರ ಮೈಮೇಲೆ ಹ-ರಿಸಲು ನಿಂತಿರುವೆ. ನಿನ್ನ ನಾಚಿಕೆಯ ಕರಗಿಸಿ ಪ್ರೀತಿ ಕಮಲ ಅರಳಿಸುವೆ ಪ್ರತಿ ಸೂರ್ಯೋದಯದ ಒಳಗೆ.



ಇನ್ನೇಕೆ ತಡ ಬಂದು ಬಿಡು ನಿನ್ನಿಷ್ಟದಂತೆ ಸರಳ ವಿವಾಹದಿ ಜೋಡಿಯಾಗಿ ಆಗಿದೆ. ಹೆಸ-ರಿಗೆ ಹೆಸರು ಸೇರಿಯಾಗಿದೆ. ನಾಲ್ಕು ಕೈಗಳು ಒಂದಾಗಿ ಅನುರಾಗ ರಾಗಕೆ ಶೃತಿ ಮೀಟಿದರೆ ಹೃದಯದಿ ಪ್ರೀತಿನಾದ ಹೊಮ್ಮುವುದು. ಬೇಸಿಗೆ ಬಿಸಿಲಿಗೆ ಕಾದ ಭುವಿಗೆ ಮಳೆರಾಯನ ಒಲವಿನಲಿ ರಸಧಾರೆ ಹರಿಯುವುದು. ಪೂರ್ಣ ಚಂದಿರನ ಹಾಲು ಬೆಳದಿಂಗಳ ಕೆಳಗೆ ಕೊಳದ ಮೊಗ್ಗು ಅರಳುವಂತೆ, ಮೃದು ಪದಗಳ ಬಳಕೆಯಲ್ಲಿ ಹೃದಯ ಕದ್ದವಳ ಒಡಲಲಿ ಪುಟ್ಟ ಮುದ್ದು ಗೊಂಬೆಯ ಮೂಡಿಸುವ ಹೆಬ್ಬಯಕೆ ಕಾಡುತಿದೆ. ಇನ್ನೇನಿದ್ದರೂ ಬಿಸಿಯುಸಿರಲಿ ಬೆರೆಯುವ ಜಗವ ಮರೆಯುವ ಆಟದಲ್ಲಿ ಮೈಮರೆಯಬೇಕಿದೆ. ಇಂತಿ ನಿನ್ನ ವೇದಾಂತ

ಲೇಖನ
ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142





## ಕಲಬುರಗಿಯಲ್ಲಿ ರೌಡಿ ಪರೇಡ್: ಪೊಲೀಸ್ ಆಯುಕ್ತರಿಂದ ಖಡಕ್ ಎಚ್ಚರಿಕೆ

**ಕಲಬುರಗಿ:** ನಗರದ ಸಿಎಆರ್ ಪರೇಡ್ ಮೈದಾನದಲ್ಲಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಅವರ ನೇತೃತ್ವದಲ್ಲಿ ರೌಡಿ ಪರೇಡ್ ಜರುಗಿತು. ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಆಯೋಜಿಸಲಾದ ಈ ಪರೇಡ್‌ನಲ್ಲಿ ವಿವಿಧ ಠಾಣೆಗಳ ರೌಡಿ ಶೀಟರ್‌ಗಳನ್ನು ಹಾಜರುಪಡಿಸಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಪೊಲೀಸ್ ಆಯುಕ್ತರು, ಸಮಾಜದ ಶಾಂತಿ ಭಂಗ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಅಪರಾಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದೆ ಸನ್ಮಾರ್ಗದಲ್ಲಿ ನಡೆಯುವಂತೆ ಸೂಚಿಸಿದರು.

ರೌಡಿ ಪರೇಡ್‌ನಲ್ಲಿ ಎಸಿಪಿ ಶಾಲೂ, ಡಿಸಿಪಿಗಳು ಸೇರಿದಂತೆ ನಗರ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

## ಕರುನಾಡಿನ ಇತಿಹಾಸದ ಪುಟ ತೆರೆಯುವ ಬಬಲಾದ ಗ್ರಾಮದ ಶಾಸನ, ದೇಗುಲಗಳು : ಮುಡುಬಿ ಗುಂಡೇರಾವ

ಕಲಬುರಗಿ: ಕರುನಾಡಿನ ಇತಿಹಾಸದ ಪುಟ ತೆರೆಯುವ ಬಬಲಾದ ಗ್ರಾಮದ ಶಾಸನ, ದೇಗುಲ, ಸ್ಮಾರಕಗಳ ರಕ್ಷಣೆ ಮಾಡಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಸಂಶೋಧಕ ಸಾಹಿತಿ ಮತ್ತು ಕಲಬುರಗಿ ಜಿಲ್ಲಾ 22ನೇ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಮುಡುಬಿ ಗುಂಡೇರಾವ ಅಭಿಮತವ್ಯಕ್ತಪಡಿಸಿದರು.

ಜಿಲ್ಲೆಯ ಕಮಲಾಪೂರ ತಾಲೂಕಿನ ಬಬಲಾದ ಗ್ರಾಮದ ಐತಿಹಾಸಿಕ ಮಲ್ಲಿಕಾರ್ಜುನ ದೇವಾಲಯದಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗ ಆಯೋಜಿಸಿದ ಜಿಲ್ಲೆಯ ಐತಿಹಾಸಿಕ ಸ್ಥಳ ಪರಿಚಯಾತ್ಮಕ (51) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಕನ್ನಡಿಗರ ಶೌರ್ಯ, ಪರಾಕ್ರಮತೆ, ಕಲೆ, ಸಾಹಿತ್ಯ, ಸಂಗೀತ, ಆಡಳಿತ, ಸಾಮಾಜಿಕ, ಆರ್ಥಿಕ, ಧರ್ಮ ಆಧ್ಯಾತ್ಮದ ಸಾಧನೆಗಳ ಕುರಿತು ಇಲ್ಲಿಯ ಶಾಸನ, ದೇಗುಲಗಳು, ಶಿಲ್ಪಗಳು ತಿಳಿಸಿಕೊಡುತ್ತವೆ. ಮನ್ನೆದಡಿ ಸಾಸಿರ (ಆಳಂದ) ನಾಡು ಎಂದರೆ ಅಂದಿನ ಕಾಲದಲ್ಲಿ ಸಾವಿರ ಹಳ್ಳಿಗಳಿಗೆ ರಾಜಧಾನಿಯಾಗಿತ್ತು. ಅದರ ವ್ಯಾಪ್ತಿಗೆ ಸೇರಿದ ಬಬಲಾದ ಗ್ರಾಮವು



ಒಂದು ಸಾವಿರ ವರ್ಷಗಳ ಹಿಂದೆ ಬಬಲದ ಗ್ರಾಮವು ಶೈಕ್ಷಣಿಕ ವಿದ್ಯಾಕೇಂದ್ರವಾಗಿ ಮೆರೆದಿತ್ತು. ಈ ಭಾಗದಲ್ಲಿ ಬೆಳೆದ ಸಾಮಭರ ಪದಾರ್ಥಗಳಿಗೆ ಹೊರನಾಡಿನಲ್ಲಿ ಭಾರಿ ಬೇಡಿಕೆ ಇತ್ತು. ಮೆಣಸು, ದಾಲಿಚಿನ, ಜೀರಗೆ, ಉತ್ತತ್ತಿ ಮುಂತಾದ ಬೆಳೆಗಳನ್ನು ಇಲ್ಲಿಯ ಅನ್ನದಾತರು ಬೆಳೆಯುತ್ತಿಂದ್ದರು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಕನ್ನಡಿಗರ ಸಾಧನೆಗಳ ಕುರಿತು ನೈಜ ಇತಿಹಾಸ ತಿಳಿಸುವ ಈ ದೇಗುಲಗಳು, ಶಾಸನ, ಶಿಲ್ಪಗಳ ರಕ್ಷಣೆ ಮಾಡಬೇಕು ಎಂದು ಸಲಹೆ ನೀಡಿದರು.

ಬಸವೇಶ್ವರ ಸಮಾಜ ಸೇವಾ ಬಳಗದ ಅಧ್ಯಕ್ಷ ಎಚ್ ಬಿ ಪಾಟೀಲ ಮಾತನಾಡಿ ಪ್ರಾಚೀನ ಜನಾಂಗದ ಇತಿಹಾಸ ಪಳವಳಿಕೆ, ದೇಗುಲಗಳ ರಕ್ಷಣೆ ನಮ್ಮೆಲರ ಹೊಣೆಯಾಗಿದೆ. ಕಳೆದ ಎರಡುವರೆ ವರ್ಷಗಳಿಂದ ನಮ್ಮ ಬಳಗ ಐತಿಹಾಸಿಕ ಜಾಗೃತಿ ಮೂಡಿಸಲಾಗುತ್ತದೆ. ಪರಿಣಾಮ ಅನೇಕ ಗ್ರಾಮಗಳಲ್ಲಿ ಗ್ರಾಮಸ್ಥರು ಸ್ವಯಂ ಪ್ರೇರಿತರಾಗಿ ಸ್ಮಾರಕಗಳನ್ನು ರಕ್ಷಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಮಾಜ ಸೇವಕ ಶಿವಯೋಗೆಪ್ಪ ಬಿರಾದಾರ ಪ್ರಮುಖರಾದ ಧೂಳಯ್ಯ ಸ್ವಾಮಿ, ಅನಿಲಕುಮಾರ, ಶರಣು, ಭಗವಂತ, ನೈತಿಕ, ಚನ್ನವೀರ, ಅಖಿಲೇಶ, ರಿಶೀಕುಮಾರ ಮುಂತಾದವರಿದ್ದರು.

ಪ್ರಾಚೀನ ಕಾಲದಲ್ಲಿ ಬಬಲಾದ ಗ್ರಾಮವು ಆಲಂದಿ ಸಾಸಿರ ನಾಡಿಗೆ ಸೇರಿತ್ತು. ಗ್ರಾಮದಲ್ಲಿರುವ ಮಲ್ಲಿಕಾರ್ಜುನ(ಮಲ್ಕಣ) ದೇವಾಲಯ ಮತ್ತು ಶಾಸನ, ಶಿಲ್ಪಗಳು ಕರುನಾಡಿನ ಇತಿಹಾಸದ ಪುಟ ತೆರೆಯುತ್ತವೆ. ಕನ್ನಡಿಗರ ರೋಚಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಗತಕಲಾದಲ್ಲಿ ಬಬಲಾದ ಗ್ರಾಮವು ಶೈಕ್ಷಣಿಕ, ಧರ್ಮ, ಆಧ್ಯಾತ್ಮದ ತವರೂರಾಗಿತ್ತು. ಅಳಿವಿನ ಅಂಚಿನಲ್ಲಿರುವ ಬಬಲಾದ ಗ್ರಾಮದ ದೇಗುಲ, ಶಾಸನ ಶಿಲ್ಪಗಳ ರಕ್ಷಣೆ ಅವಶ್ಯವಾಗಿದೆ. ಮುಡುಬಿ ಗುಂಡೇರಾವ ಸಂಶೋಧಕ ಸಾಹಿತಿಗಳು ಮತ್ತು ಸಮ್ಮೇಳನಾಧ್ಯಕ್ಷರು ಜಿಲ್ಲಾ 22ನೇ ಸಾಹಿತ್ಯ ಸಮ್ಮೇಳನ ಕಲಬುರಗಿ

## 6 ಸಾವಿರ ಮೂರ್ತಿ ಪ್ರತಿಷ್ಠಾಪನೆ ಮಾಡಿದ ನಾಡಿನ ಏಕೈಕ ಸಂತ ನೀಲಗಲ್ ಶ್ರೀಗಳು – ಸುಭುದೇಂದ್ರರು

**ಸಿರವಾರ :** ಸನಾತನ ಧರ್ಮದ ಏಳಿಗೆ ತಮ್ಮ ಜೀವನವನ್ನು ಮುಡಿಪಿಟ್ಟ ಸಂತರು ನೀಲಗಲ್ ಬೃಹನ್ಮಠದ ಪೂಜ್ಯ ಶ್ರೀ ಡಾ ಪಂಚಾಕ್ಷರಿ ಶಿವಾಚಾರ್ಯರು ಶ್ರೀಗಳು ಎಂದು ಮಂತ್ರಾಲಯ ಮಠದ ಪೀಠಾಧಿಪತಿ ಪೂಜ್ಯ ಶ್ರೀ ಸುಭುದೇಂದ್ರ ಶ್ರೀಪಾದಂಗಳು ಹೇಳಿದರು.



ಸಮೀಪದ ಶ್ರೀ ಕ್ಷೇತ್ರ ನೀಲಗಲ್ ಮಠದಲ್ಲಿ ಪರಮ ಪೂಜ್ಯ ಷ. ಬ್ರ. ಡಾ. ಶ್ರೀ ಪಂಚಾಕ್ಷರ ಶಿವಾಚಾರ್ಯ ಮತ್ತು ನೂತನ ತೇರಿನ ಮನೆ ಉದ್ಘಾಟನೆ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಅನುಗ್ರಹ ಸಂದೇಶ ನೀಡಿ, ನಾಡಿನ ಉದ್ದಗಲ ಕಾಲ್ನಡಿಗೆಯಲ್ಲಿ ಸಂಚಾರ ಮಾಡಿ 6ಸಾವಿರಕ್ಕೂ ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಏಕೈಕ ಶ್ರೀಗಳು ಎನಿಸಿಕೊಂಡಿದ್ದಾರೆ. ಈ ಭಾಗದ ಆರಾಧ್ಯ ದೈವ ಆಗಿದ್ದಾರೆ. ಇದೆ ಹಾದಿಯಲ್ಲಿ ಶ್ರೀ ಮಠದ ಕಿರಿಯ ಶ್ರೀಗಳಾದ ಪೂಜ್ಯ ಷ. ಬ್ರ, ಅಭಿನವ ರೇಣುಕ ಶಾಂತಮಲ್ಲ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗಬ್ಬೂರಿನ ಬೂದಿಬಸವೇಶ್ವರ ಶ್ರೀಗಳು, ಸೋಮವಾರಪೇಟೆಯ ಅಭಿನವ ರಾಚೋಟೇಶ್ವರ ಶ್ರೀಗಳು, ಮಾನವಿ ಕಲ್ಮಠದ ಪಂಡಿತ ವಿರೂಪಾಕ್ಷಾರಾಧ್ಯ ಶ್ರೀಗಳು, ಸುಲ್ತಾನಪುರದ ಶಂಭು ಸೋಮನಾಥ ಶ್ರೀಗಳು, ಮಂಗಳವಾರ ಪೇಟೆ ಶ್ರೀಗಳು, ಶಾಂತಕುಮಾರ್ ಮಠದ ಸೇರಿದಂತೆ ಶ್ರೀಮಠದ ಸಾವಿರಾರು ಭಕ್ತಾದಿಗಳು ಇದ್ದರು.

## ಮಾನವ ಸಂಪನ್ಮೂಲ ಸಂಸ್ಥೆಯ ಬೆನ್ನೆಲುಬು

ಕಲಬುರಗಿ: ಯಾವುದೇ ಒಂದು ಕಂಪನಿ ಅಥವಾ ಸಂಸ್ಥೆಗೆ ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡುವುದ-ರಿಂದ, ವೇತನ, ಸಂಘರ್ಷ ಪರಿಹಾರ, ಉದ್ಯೋಗಿಗಳಿಗೆ ತರಬೇತಿ, ಕಾನೂನು ಸಮಸ್ಯೆಗಳನ್ನು ನಿರ್ವಹಿಸುವುದು, ಉದ್ಯೋಗಿಗಳನ್ನು ಒಗ್ಗೂಡಿಸುವುದು ಸೇರಿದಂತೆ ಮುಂತಾದ ಪ್ರಮುಖ ಕಾರ್ಯಗಳನ್ನು ಮಾಡುವ ಮಾನವ ಸಂಪನ್ಮೂಲ ವಿಭಾಗವು ಸಂಸ್ಥೆಯ ಬೆನ್ನೆಲುಬಾಗಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಜೆ.ಆರ್ ನಗರದಲ್ಲಿನ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಬುಧವಾರ ಜರುಗಿದ 'ಅಂತಾರಾಷ್ಟ್ರೀಯ ಮಾನವ ಸಂಪನ್ಮೂಲ ದಿನಾಚರಣೆ'ಯನ್ನು ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಮಾನವ ಸಂಪನ್ಮೂಲದ ಮಹತ್ವವನ್ನು ಸಾರಲು ಪ್ರತಿ ವರ್ಷ 'ಮೇ-20'ರಂದು ಈ ದಿನಾಚರಣೆಯನ್ನು ಆಚ-ರಿಸಲಾಗುತ್ತದೆ. ಮಾನವ ಸಂಪನ್ಮೂಲಗಳ ನಿರ್ವಹಣೆಯ ಕಾರ್ಯಾಚರಣೆಯು ಅನೇಕ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿದೆ. ಯಾವ ರೀತಿಯ ಸಿಬ್ಬಂದಿ ವರ್ಗವನ್ನು ಹೊಂದಬೇಕು, ಈ ಅಗತ್ಯಗಳನ್ನು ಪೂರೈಸಲು ಸ್ವತಂತ್ರ ಗುತ್ತಿಗೆದಾರರನ್ನು ಬಳಸಬೇಕೆ ಅಥವಾ ನೌಕರರನ್ನು ನೇಮಕಮಾಡಿಕೊಳ್ಳಬೇಕೆ ಎಂಬುದನ್ನು ನಿರ್ಧ-



ರಿಸುತ್ತವೆ. ಉತ್ತಮ ನೌಕರರನ್ನು ನಿಯೋಜಿಸಿ, ಅವರಿಗೆ ತರಬೇತಿ ನೀಡಲಾಗುತ್ತದೆ. ಉದ್ಯೋಗಕ್ಕೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸುವ ಮೂಲಕ ಎಚ್.ಆರ್ ವಿಭಾಗವು ಸಂಸ್ಥೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಸಮಾಜ ಸೇವಕರಾದ ಶಿವಯೋಗೆಪ್ಪಾ ಎಸ್.ಬಿರಾದಾರ, ಓಂಕಾರ ವಠಾರ, ಸಂಸ್ಥೆಯ ಸಿಬ್ಬಂದಿಗಳಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್, ರುಕ್ಸಾನಾ ಪಟೇಲ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ರಾಯಚೂರಿನಲ್ಲಿ 371(ಜೆ) ಹೋರಾಟಗಾರರ ಮಹತ್ವದ ಸಭೆ ಮೇ 24ಕ್ಕೆ

ಬೀದರ:ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ಉದ್ದೇಶದಿಂದ ಜಾರಿಗೆ ಬಂದ ಕಲಂ 371(ಜೆ)ಗೆ 12 ವರ್ಷಗಳು ಕಳೆದರೂ ಸಹ ಈ ಭಾಗದ ಜನರ ಜೀವನಮಟ್ಟದಲ್ಲಿ ನಿರೀಕ್ಷಿತ ಮಟ್ಟದ ಸುಧಾರಣೆ ಕಂಡುಬಂದಿಲ್ಲ ಎಂದು ಹೈದ್ರಾಬಾದ ಕರ್ನಾಟಕ ಹೋರಾಟ ಸಮಿತಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಂಘಟನೆಯ ವಿಭಾಗೀಯ ಮಹಾ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ಬೆಲ್ದಾರ್, ಕಲ್ಯಾಣ ಕರ್ನಾಟಕ ಪ್ರದೇಶವು ಇನ್ನೂ ದಾರಿದ್ರ್ಯ, ನಿರುದ್ಯೋಗ ಹಾಗೂ ಹಿಂದುಳಿತನದಿಂದ ಬಳಲುತ್ತಿದೆ ಎಂದು ಆರೋಪಿಸಿದ್ದಾರೆ.

ಗೋವಿಂದರಾವ್ ವರದಿಯ ಪ್ರಕಾರ ಈ ಭಾಗದ ಜನರ ಜೀವನಮಟ್ಟ ಮತ್ತಷ್ಟು ಹದಗೆಟ್ಟಿದ್ದು, ಸರ್ಕಾರಿ ಶಾಲೆಗಳಲ್ಲಿ ಸುಮಾರು 30 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯಿಂದ ಆಸ್ಪತ್ರೆಗಳು ಬಿಕೋ ಎನ್ನುತ್ತಿವೆ. ಉದ್ಯೋಗಾವಕಾಶಗಳ ಕೊರತೆಯಿಂದ ವಿದ್ಯಾವಂತ ಯುವಕರು ನಿರುದ್ಯೋಗಿಗಳಾಗುತ್ತಿದ್ದು, ಗ್ರಾಮೀಣ ಭಾಗದ ಜನರು ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಳೆದ 12 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸುಮಾರು 20 ಸಾವಿರ ಕೋಟಿ ರೂಪಾಯಿ ಅನುದಾನ ಮಂಜೂರಾಗಿದ್ದರೂ, ಅದರಲ್ಲಿ ಶೇಕಡಾ 40 ಕ್ಕಿಂತ ಕಡಿಮೆ ಮೊತ್ತಕ್ಕೆ ಮಾತ್ರ ಕ್ರಿಯಾ ಯೋಜನೆ ರೂಪಿಸಲಾಗಿದೆ. 2025-26ನೇ ಸಾಲಿನಲ್ಲಿ ಮಂಜೂರಾದ 5000 ಕೋಟಿ ರೂಪಾಯಿ ಅನುದಾನದಲ್ಲೂ ಕೇವಲ ಅಂ-ದಾಜು 800 ಕೋಟಿ ರೂಪಾಯಿಗೆ ಮಾತ್ರ ಯೋಜನೆ ಸಿದ್ಧಪಡಿಸಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂದು ಆರೋಪಿಸಲಾಗಿದೆ.

# ಇಂದು ತಿಕೋಟಾದಲ್ಲಿ ಯುವಶಕ್ತಿ ಕಾರ್ಯಕ್ರಮ

**ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಯುವಶಕ್ತಿ ಕಾರ್ಯಕ್ರಮ ಮೇ 24 ರಂದು ರವಿವಾರ ತಿಕೋಟಾ ಪಟ್ಟಣದಲ್ಲಿ ನಡೆಯಲಿದೆ.

ಸಂಜೆ 5 ಗಂಟೆಗೆ ತಿಕೋಟಾ ಪಟ್ಟಣದ ಶ್ರೀ ಕನಕದಾಸ ಮಂಗಲ ಕಾರ್ಯಾಲಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಭಾಗವಹಿಸಲಿದ್ದು, ತಿಕೋಟಾ ಹಿರೇಮಠದ ಶ್ರೀ ಶಿವಬಸವ ಶಿವಾಚಾರ್ಯರು, ತೊರವಿಯ ಶ್ರೀ ಸಿದ್ದಲಿಂಗೇಶ್ವರ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದಾರೆ.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿದ್ದು ಗೌಡನವರ, ಈರನಗೌಡ ಬಿರಾದಾರ, ಮುಖಂಡರಾದ ವಿ. ಎಂ. ಪಾಟೀಲ, ಲೇಪು ಕೊಣ್ಣೂರ, ರಾಮರಾವ ದೇಸಾಯಿ, ಬಸಯ್ಯ ವಿಭೂತಿ, ಭಾಗೀರಥಿ ತೇಲಿ, ಜಕ್ಕಪ್ಪ ಯಡವೆ, ರಮೇಶ ಧರಣಾಕರ, ಮಮ್ಮುಲಾಲ ಮುಜವರ, ಜಾಕೀರ್ ಬಾಗವಾನ್, ಸಂತೋಷ ಕೋಲಾರ, ಸದಾಶಿವ ಪೂಜಾರಿ, ಭೀಮು ಹಂಗರಗಿ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ಯುವಕರಲ್ಲಿ ನಾಯಕತ್ವ ಬೆಳೆಸುವುದು, ರಾಜಕೀಯ ಕ್ಷೇತ್ರಕ್ಕೆ ಆಕರ್ಷಿಸಿ ದೇಶದ ಅಭಿವೃದ್ಧಿಗೆ ಅವರದೇ ಆದ ಕೊಡುಗೆ ನೀಡಲು ಪ್ರೋತ್ಸಾಹಿಸುವುದು, ಸೇರಿದಂತೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಕುರಿತು ಯುವಕರಲ್ಲಿ ಆಸಕ್ತಿ ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಯುವ ಮುಖಂಡರಾದ ಬಾಬು ಹಂಚಿನಾಳ, ಪ್ರಕಾಶ ಜಲಗೇರಿ, ಸುರೇಶ ಕೊಣ್ಣೂರ, ಅರುಣ ಖೈರಾವ, ಸಚಿನ ಪಾಟೀಲ ಮುಂತಾದವಹ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಕಾರ್ಯಕ್ರಮದ ಉಸ್ತುವಾರಿ ಕಿರಣ ದಳವಾಯಿ(ದೇಸಾಯಿ) ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರವರ ಕಛೇರಿ, ಭೂಸ್ವಾಧೀನ, ಪುನರ್ವವಸತಿ ಮತ್ತು ಪುನರ್ ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ಜಮಖಂಡಿ

ನಮೂನೆ-V

[ಕರ್ನಾಟಕ ತಿದ್ದುಪಡಿ ನಿಯಮ-5, 20(1) (ಬಿ)]

### ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 11(1)ರ ಮೇರೆಗೆ ಅಧಿಸೂಚನೆ

**ಸಂ:ವಿಜಿಜ/ಭೂಸ್ವಾ:2:ಸಿಆರ್-04/2026-27** **ದಿನಾಂಕ: 18-04-2026**

ಸಾರ್ವಜನಿಕ ಉದ್ದೇಶದ **ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ** Construction of Distributaries & its Laterals (Distributory No.2 to 8 including Major Distributaries-Bommanjogi Canal, Devar Hipparagi Canal, Chatarki canal and Balance Laterals of Kadalewada Canal) of Nagathan Branch canal under Chimmalagi LIS **(ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ನಾಗಠಾಣ ಶಾಖಾ ಕಾಲುವೆಯ ಬಮ್ಮನಜೋಗಿ ವಿತರಣಾ ಕಾಲುವೆ ನಿರ್ಮಾಣಕ್ಕಾಗಿ) ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸುವ ನಿರ್ಮಾಣಕ್ಕಾಗಿ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮಣೂರ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ** ಸ್ವಾಧೀನತೆಯ ಕ್ಷೇತ್ರ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:16)ರ ಕಲಂ-10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ-II ಮತ್ತು III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ **ಸಂಖ್ಯೆಕಂ.ಇ/36/ಭೂಸ್ವಾವಿ/2014 ದಿ.13-03-2014 ಹಾಗೂ ಸಂಖ್ಯೆ : 16/2019 ದಿನಾಂಕ : 16-07-2019ರ ಸರ್ಕಾರದ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ದಿನಾಂಕ: 28-10-2015 ಹಾಗೂ ದಿನಾಂಕ : 29-09-2021ರಂದು** ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ -2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು ಭೂಸ್ವಾಧೀನ, ಮತ್ತು ಪುನರ್ವಸತಿ ಮತ್ತು ಪುನರ್ವವಸತಿ ಮತ್ತು ಪುನರ್ ನಿರ್ಮಾಣ **ಕೃ.ಮೇ.ಯೋ. ಜಮಖಂಡಿ** ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ, ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರ ದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಕಾಯ್ದೆ-2013 (2013ರ ಕೇಂದ್ರ ಅಧಿ ನಿಯಮ ಸಂಖ್ಯೆ:30) ರ ಕಲಂ 11(1)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿ ಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ.
ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದು ಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ.30)ರ ಕಲಂ-15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪ ವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು, ತದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವದು,

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ, ಕಛೇರಿ ಇಂಡಿ.ರೇ.ಸ್ಟೆ. ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

**ಸಂ.ಎಲ್ಎಕ್ಯೂ:ಎಸ್ಆರ್-11/2025-26**

### ಅನುಸೂಚಿ

**ಗ್ರಾಮ: ಮಣೂರ** **ಹೋಬಳಿ: ದೇವರಹಿಪ್ಪರಗಿ**

**ತಾಲ್ಲೂಕು: ದೇವರಹಿಪ್ಪರಗಿ** **ಜಿಲ್ಲೆ: ವಿಜಯಪೂರ**

| ಅ. ನಂ. | ಖಾತೆದಾರರ ಹೆಸರು(ಪಹಣಿಯಂತೆ) ಭೂಮಾಲಿಕರ/ ಹಿಡುವಳಿದಾರರ ಹೆಸರು | ಸರ್ವೆ ಖಾತಾ ನಂಬರ | ತರಹೆ | ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | ಬಮ್ಮನಜೋಗಿ ವಿತರಣಾ ಕಾಲುವೆ | | | | |
| 1 | 1) ಶ್ರೀಮಂತ ತಂ.ಭಾಗಪ್ಪ ಮನಗೂಳಿ | 242/1 | ಖುಷ್ಕಿ | | |
| | 2) 1.ಚಂದಪ್ಪ ತಂ.ಭಾಗಪ್ಪ ಮನಗೂಳಿ,<br>2.ಹಣಮಂತ ತಂ.ಭಾಗಪ್ಪ ಮನಗೂಳಿ | 242/2 | ಖುಷ್ಕಿ | 2-00 | |
| | 3) ಮಲ್ಲಪ್ಪ ತಂ.ಸಿದ್ದಪ್ಪ ಬೆನಾಳ, | 242/3 | ಖುಷ್ಕಿ | | |
| | 4) ಅಂಬೋಜಿ ತಂ.ಸಿದ್ದಪ್ಪ ಬೆನಾಳ | 242/4 | ಖುಷ್ಕಿ | | |
| | 5) ರಮೇಶ ತಂ.ಸಿದ್ದಪ್ಪ ಬೆನಾಳ | 242/5 | ಖುಷ್ಕಿ | | |
| | | ಒಟ್ಟು ವಿಸ್ತೀರ್ಣ | | **2-00** | |

ಸಹಿ/-
**ಪ್ರಕಾಶ.ಜಿ.ರಜಪೂತ**
**ವಿಶೇಷ ಜಿಲ್ಲಾಧಿಕಾರಿಗಳು,**
**ಹಾಗೂ ಸಮೂಹ ವ್ಯವಸ್ಥಾಪಕರು,**
**ಭೂಸ್ವಾಧೀನ ಹಾಗೂ ಪುನರ್ವವಸತಿ ಮತ್ತು ಪುನರ್ ನಿರ್ಮಾಣ**
**ಕೃಷ್ಣಾ ಮೇಲ್ದಂಡೆ ಯೋಜನೆ ಜಮಖಂಡಿ.**

# ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನ



**ಉದಯರಶ್ಮಿ ದಿನಪತ್ರಿಕೆ**

ತಾಳಿಕೋಟೆ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ತಾಳಿಕೋಟೆ ತಾಲೂಕ ಘಟಕದ ನೂತನ ಪದಾಧಿಕಾರಿಗಳಿಗೆ ತಾಲೂಕಿನ ಶಿಕ್ಷಕರ ಪರವಾಗಿ ಸರ್ಕಾರಿ ನೌಕರರ ಸಂಘದ ವತಿಯಿಂದ ಮತ್ತು ಶಿಕ್ಷಕರ ಸೋಸಾಯಿಟಿ ವತಿಯಿಂದ ಶುಕ್ರವಾರರಂದು ಸನ್ಮಾನಿಸಿ ಗೌರವಿಸಲಾಯಿತು.

ಈ ಸಮಯದಲ್ಲಿ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಎಸ್.ಜಿ. ಜಾಲವಾದಿ ಅವರು ಮಾತನಾಡಿ, 2026 ರಿಂದ 2031ರವರೆಗಿನ 5 ವರ್ಷದ ಅವಧಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಳಿಕೋಟಿ ತಾಲೂಕ ಘಟಕದ ಅಧ್ಯಕ್ಷರಾಗಿ ಶಿಕ್ಷಕರಾದ ಭೀಮನಗೌಡ ವಜ್ಜಲ್, ಉಪಾಧ್ಯಕ್ಷರಾಗಿ ತಾರಾ ಲಮಾಣಿ, ಮಹಿಳಾ ಉಪಾಧ್ಯಕ್ಷರಾಗಿ ರೇಣುಕಾ ಬಸಪ್ಪ ಆಲೂರ, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ ಬಾಲಪ್ಪ ಬೀರಗೊಂಡ, ಕೋಶಾಧ್ಯಕ್ಷರಾಗಿ ರಮೇಶಕುಮಾರ ಹಿಪ್ಪರಗಿ, ಮಹಿಳಾ ಸಹ ಕಾರ್ಯದರ್ಶಿಯಾಗಿ ಸರಸ್ವತಿ ಬನ್ನೆಟ್ಟಿ, ಸಹ ಕಾರ್ಯದರ್ಶಿಗಳಾಗಿ ಅಲ್ತಾಫ್ ನಗಾರ್ಚಿ, ಎನ್ಕೆ ಸಿಪಾಯಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ನೀಲಮ್ಮ ಮೈಲೇಶ್ವರ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಶೈಲ ನಾಯ್ಕೋಡಿ ಅವಿರೋಧವಾಗಿಆಯ್ಕೆಯಾಗಿದ್ದಾರೆಅವರಿಗೆ ಅಭಿನಂದಿಸುವದಾಗಿ ತಿಳಿಸಿದರಲ್ಲದೇ ಸಂಘದ ಕಾರ್ಯಚಟುವಟಿಕೆಗಳ ಮೂಲಕ ಶಿಕ್ಷಕರ ಸಮಸ್ಯೆಗೆ ಸ್ಪಂದಿಸುವಂತಾಗಲಿದೆ ಎಂದರು.

ಸನ್ಮಾನ ಸ್ವೀಕರಿಸಿ ಸಂಘದ ಅಧ್ಯಕ್ಷರಾದ ಬಿ.ಟಿ.ವಜ್ಜಲ್, ಉಪಾಧ್ಯಕ್ಷ ತಾರಾ ಲಮಾಣಿ ಹಾಗೂ ಪ್ರಧಾನ ಕಾರ್ಯದರ್ಶಿ ಸುರೇಶ ಬೀರಗೊಂಡ ಅವರು ಮಾತನಾಡಿ, ಎಲ್ಲ ಶಿಕ್ಷಕ ಸದಸ್ಯರು ನಮ್ಮೆಲ್ಲರ ಮೇಲೆ ವಿಶ್ವಾಸವಿರಿಸಿ ಅವಿರೋಧವಾಗಿ ಆಯ್ಕೆ ಮಾಡಿ ಸೇವಾ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಅವರ ವಿಶ್ವಾಸಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಂಡು ಅವರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದರು.

ಇದೇ ಸಮಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಳಿಕೋಟಿ ತಾಲೂಕ ಘಟಕಕ್ಕೆ ಅವಿರೋಧವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಡಿ ಎನ್ ಚಿಕ್ಕಮಠ, ಜೆ. ಬಿ.ಕುಲಕರ್ಣಿ, ಕೆ.ಪಿ. ಬಿರಾದಾರ, ಬಾಲಾಜಿ ವಿಜಾಪುರ, ಎನ್. ಬಿ.ಮಂಟಗಿ, ಶಂಕರಗೌಡ ಬಿರಾದಾರ, ಎಸ್ ಎಂ ಬೈಚಬಾಳ, ಜಿ ಆರ್ ಸೋನಾರ, ಸಂಜು ಹಜೇರಿ, ಡಿಜೆ ಬಾಗೇವಾಡಿ, ಆರ್ ಎಲ್ ಕುಲಕರ್ಣಿ, ಎಸ್.ಎಂ.ಬೈಚಬಾಳ, ಹಣಮಂತ ಮಾದರ, ಎಂ.ಜಿ.ಕುನ್ನೂರ, ರಾಮನಗೌಡ ಬಿರಾದಾರ, ಶಿವನಗೌಡ ಅಸ್ಕಿ, ಬಿ.ಸಿ.ಹುಲ್ಲೂರ, ಎಸ್ ಎನ್ ಪಾಟೀಲ, ಕೆ.ಎನ್. ಜಮಾದಾರ, ಎ.ಐ. ಪತ್ತಾರ, ಸಂತೋಷ್ ನಾವಿ, ರಾಜು ಹಿರೇಮಠ, ಶಿಕ್ಷಕೀಯರಾದ ಜಿ.ಟಿ.ಬಿರಾದಾರ, ಎಲ್.ಎ.ಬಿಜಾಪುರ, ಎಸ್ ಹೆಚ್ ಗಾಳಪ್ಪಗೋಳ, ಬಿ.ಬಿ.ಕುಂಟೋಜಿ, ಎಸ್.ಟಿ. ತಮ್ಮಣ್ಣವರ, ಆರ್ ಸಿ ಇಂಗಳೆ, ಎಸ್ ಎಸ್ ಪಾಟೀಲ, ಎಂ ಎಸ್ ಹೊಸಗೌಡ್ರ ಎ.ಜಿ.ಕುಚನೂರ ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕ ಸುರೇಶ ವಾಲಿಕಾರ ನಿರೂಪಿಸಿ, ವಂದಿಸಿದರು.

# ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಗಂಗಾ ಕೊಳೂರಗೆ ಶಾಸಕರಿಂದ ಸನ್ಮಾನ




**ಉದಯರಶ್ಮಿ ದಿನಪತ್ರಿಕೆ**

ತಾಳಿಕೋಟೆ: ಪುಟ್ಟ ಮೈಲೇಶ್ವರ ಗ್ರಾಮದಲ್ಲಿ ಹುಟ್ಟಿ ರಾಜ್ಯಮಟ್ಟದಲ್ಲಿ ಸಾಧನೆಯ ಹೆಜ್ಜೆಯನ್ನು ಇಡುತ್ತಾ ಸಾಗಿರುವ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯ ಕಾರ್ಯ ಮೆಚ್ಚುವಂತಹದ್ದಾಗಿದೆ ಗ್ರಾಮೀಣ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ರಾಜ್ಯಕ್ಕೆ ಪರಿಚಯಿಸುತ್ತಾ ಸಾಗಿರುವದು ಹೆಮ್ಮೆಯ ಸಂಗತಿ ಎಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಹೇಳಿದರು.

ತಾಲೂಕಿನ ಮೈಲೇಶ್ವರ ಗ್ರಾಮದ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವಬ್ರಿಲಿಯಂಟ್ಆಂಗ್ಲಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಗಂಗಾ ಅಶೋಕ ಕೋಳೂರ ಎಸ್ಎಸ್ಎಲ್ಸಿ ಪರಿಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಅವರು ತಮ್ಮ ವತಿಯಿಂದ ಶುಕ್ರವಾರರಂದು ಆಯೋಜಿಸಿದ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಗಂಗಾ ಕೋಳೂರಗೆ ಸನ್ಮಾನಿಸಿ ಪ್ರೋತ್ಸಾಹಿಸಿ ಮಾತನಾಡುತ್ತಿದ್ದ ಅವರು, ಈ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗುತ್ತಿದ್ದು ಇದೀಗ ಗಂಗಾ ವಿದ್ಯಾರ್ಥಿನಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ನನ್ನ ದೇವರಹಿಪ್ಪರಗಿ ಮತಕ್ಷೇತ್ರದ ಕೀರ್ತಿಯನ್ನು ಹೆಚ್ಚಿಸಿದ್ದಾಳೆ ಪ್ರತಿಭಾವಂತ ವಿದ್ಯಾರ್ಥಿಗಳನ್ನಾಗಿ ರೂಪಿಸುವಲ್ಲಿ ಮುಂದುವರೆದ ಈ ಬ್ರಿಲಿಯಂಟ ಶಿಕ್ಷಣ ಸಂಸ್ಥೆಯ ಕಾರ್ಯ ಮೆಚ್ಚುವಂತಹದ್ದಾಗಿದೆ. ಈ ವಿದ್ಯಾರ್ಥಿಇಯ ಸಾಧನೆಗೆ ಶಿಕ್ಷಕರ ಪರಿಶ್ರಮ ಸಂಸ್ಥೆಯ ಪರಿಶ್ರಮ ಮತ್ತು ಪಾಲಕರ ಸಹಕಾರಕ್ಕೆ ಅಭಿನಂದಿಸುತ್ತೇನೆಂದ ಅವರು, ವಿದ್ಯಾರ್ಥಿಗಳು ಶಿಕ್ಷಕರು ನೀಡುವ ಪಾಠ ಭೋದನೆಗಳನ್ನು ಮನದಟ್ಟು ಮಾಡಿಕೊಳ್ಳುವ ರೀತಿ ಗಂಗಾ ಕೊಳೂರ ವಿದ್ಯಾರ್ಥಿನಿಯನ್ನು ನೋಡಿ ಕಲಿತಕೊಳ್ಳಬೇಕು. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಎಂಥ-ಹ ಸಾಧನೆಯನ್ನಾದರೂ ಮಾಡಬಹುದು ಎಂಬುದಕ್ಕೆ ಈ ವಿದ್ಯಾರ್ಥಿನಿಯೇ ಉತ್ತಮ ಉಧಾಹರಣೆಯಾಗಿದ್ದಾಳೆ ಎಂದರು.

ಪ್ರಾಸ್ತಾವಿಕವಾಗಿ ಜೆಡಿಎಸ್ ತಾಲೂಕಾ ಅಧಕ್ಷ ಮಡು ಸಾಹುಕಾರ ಬಿರಾದಾರ ಅವರು ಮಾತನಾಡಿ, ಶಾಸಕ ರಾಜುಗೌಡ ಪಾಟೀಲ ಅವರು ಶಿಕ್ಷಣ ಹಾಗೂ ಕೃಷಿಗೆ ಹೆಚ್ಚು ಒತ್ತು ನೀಡಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ, ವಿದ್ಯಾರ್ಥಿನಿ ಗಂಗಾ ಕೋಳೂರ ಅವರ ಈ ಸಾಧನೆ ಶಾಸಕರಿಗೆ ಇನ್ನಷ್ಟು ಹುಮ್ಮಸ್ಸು ತಂದು ಕೊಟ್ಟಿದೆ. ಸಾಧನೆ ಎಂಬುದು ಯಾರ ಸ್ವತ್ತು ಅಲ್ಲ ಅದು ಶಿಕ್ಷಣ ಸಂಸ್ಥೆಯಲ್ಲಿ ನೀಡುವ ಪಾಠ ಭೋದನೆಯ ನಿತ್ಯ ಮರು ಅಧ್ಯಯನ ಮಾಡುವದರೊಂದಿಗೆ ಮುನ್ನುಗುತ್ತಾರೋ ಸಾಧನೆ ಅವರನ್ನು ಹುಡುಕಿಕೊಂಡು ಬರಲಿದೆ ಅಂತಹ ಒಳ್ಳೆಯ ಪಾಠ ಭೋದನೆಯ ಮೂಲಕ ಈ ಭಾಗದಲ್ಲಿಯೇ ಹೆಸರುವಾಸಿಯಾಗಿರುವ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆ ರಾಜ್ಯದಲ್ಲಿಯೇ ಮಾದರಿಯ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದರು.

ಮಾರುತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಬಿ. ಮಡಿವಾಳರ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಾಸಕ ರಾಜುಗೌಡ ಪಾಟೀಲ ಇವರಿಗೆ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ.ನಡುವಿನಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಮಯದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಆರ್ ಬಿ ನಡುವಿನಮನಿ, ತಾಪಂ ಮಾಜಿ ಅಧ್ಯಕ್ಷ ರಾಜುಗೌಡ ಕೋಳೂರ, ವೀರೇಶಗೌಡ ಪಾಟೀಲ, ಉಮೇಶ ಮೈಲೇಶ್ವರ, ಅಪ್ಪು ಕುಳಗೇರಿ, ಪಿಡಿಒ ಪ್ರಭು ಚೆನ್ನೂರ, ಸಂಸ್ಥೆಯ ನಿರ್ದೇಶಕರಾದ ಎಸ್. ಎಚ್.ಪಾಟೀಲ, ಶ್ರೀಮತಿ ಲೀಲಾದೇವಿ ಎಂ. ಬಿರಾದಾರ, ಶ್ರೀಮತಿ ನಿರ್ಮಲಾ ಎಸ್ ಗಡಗಿ, ಡಾ.ಶಶಿಧರ ಬಿರಾದಾರ, ಕನ್ನಡ ಮಾಧ್ಯಮ ಮುಖ್ಯೋಪಾಧ್ಯಾಯ ಡಾ.ವಿನಾಯಕ ಪಟಗಾರ, ಆಂಗ್ಲ ಮಾಧ್ಯಮ ಮುಖ್ಯೋಪಾಧ್ಯಾಯ ಬಿ.ಜಿ.ಕರಕಳ್ಳಿ, ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಶಿಕ್ಷಕ ಸಿದ್ದು ಕರಡಿ ನಿರೂಪಿಸಿದರು.

# ಮಹಿಳೆ ಮಮತೆ, ಮಮಕಾರದ ಮಾತೃ ಸ್ವರೂಪಿ : ಡಾ. ಪ್ರಭುಗೌಡ

**ಉದಯರಶ್ಮಿ ದಿನಪತ್ರಿಕೆ**



ಡೋಣಿ ಕಡಕೋಳ(ದೇವರಹಿಪ್ಪರಗಿ): ಉಡಿ ತುಂಬುವಂಥ ಕಾರ್ಯಕ್ರಮದಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆ ನಮ್ಮ ಸಂಪ್ರದಾಯದ ಪಾಲನೆ ಹಾಗೂ ಬೆಳವಣಿಗೆಯನ್ನು ಸೂಚಿಸುತ್ತದೆ ಎಂದು ಕಡಕೋಳ ಗದ್ದುಗೆಹಿರೇಮಠದ ಮಡಿವಾಳೇಶ್ವರ ಸ್ವಾಮೀಜಿ ಹೇಳಿದರು. ತಾಲ್ಲೂಕಿನ ಡೋಣಿ ಕಡಕೋಳ ಗ್ರಾಮದಲ್ಲಿ ಶುಕ್ರವಾರ ಹೇಮರಡ್ಡಿ ಮಲ್ಲಮ್ಮ ಪುರಾಣದ ಅಂಗವಾಗಿ ಜರುಗಿದ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಇಂದಿನ ಉಡಿ ತುಂಬುವ ಕಾರ್ಯದಲ್ಲಿ ಗ್ರಾಮದ ಮಾತೆಯರು ಭಾಗವಹಿಸಿ ಯಶಸ್ವಿಗೊಳಿಸಿದ್ದು ಅತ್ಯಂತ ಸಂತೋಷದ ವಿಷಯ ಎಂದರು.

ವಿಜಯಪುರ ಅನುಗ್ರಹ ಆಸ್ಪತ್ರೆಯ ಡಾ.ಪ್ರಭುಗೌಡ ಬಿ.ಎಲ್(ಚಬನೂರ) ಮಾತನಾಡಿ, ಮಹಿಳೆ ಹಿಂದೆ, ಇಂದು, ಎಂದಿಗೂ ಮಮತೆ, ಮಮಕಾರದ ಮಾತೃ ಸ್ವರೂಪಿ. ಅಂತೆಯೇ ನಮ್ಮ ನೆಲದ ಸಂಪ್ರದಾಯ, ಸಂಸ್ಕೃತಿಗಳನ್ನು ಪಾಲಿಸಿ ಮುಂದುವರೆಸಿಕೊಂಡು ಹೋಗುವಲ್ಲಿ ಅವಳು ಸದಾ ಮುಂದು, ಅಂತೆಯೇ ಅವಳಿಗೆ ಪೂಜ್ಯನೀಯ ಸ್ಥಾನ ನೀಡಿದ್ದೇವೆ ಎಂದರು.

ಪುರಾಣ ಪ್ರವಚನಕಾರ ದೇವರಹಿಪ್ಪರಗಿ ಜಡಿಮಠ ಜಡಿಸಿದ್ಧೇಶ್ವರ ಸ್ವಾಮೀಜಿ, ಹಿರೇಮಠದ ಮಹಾಲಿಂಗಯ್ಯ ಸ್ವಾಮೀಜಿ, ಮಹಾದೇವಿ ಬಸಣ್ಣವರ, ಶಶಿಕಲಾ ತೆಗ್ಗಿನಮನಿ, ಲಲಿತಾ ಖೈನೂರ, ರಾಜಶ್ರೀ ಹಿರೇಮಠ, ಜಯಶ್ರೀ ಯಲರಡ್ಡಿ, ಶಶಿಕಲಾ ಕಲ್ಲಣ್ಣವರ, ಜ್ಯೋತಿ ಉಮರ್ಗಿ ಸೇರಿದಂತೆ ಹಲವರು ಭಾಗವಹಿಸಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR